7. ಶಾಸನ ರಚನೆ

(ಪರ್ಯಾಲೋಚನಾ ಪ್ರಸ್ತಾವ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ, 1999

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ತಿದ್ದುಪಡಿ ವಿಧೇಯಕ 1999 ನ್ನು ಈಗಾಗಲೇ ಮಂಡಿಸಿದ್ದೇವೆ. ಕೆಲವು ಉಪಯುಕ್ತ ಸಲಹೆಗಳನ್ನು ಮಾನ್ಯ ಗೌರವಾನ್ವಿತ ಸದಸ್ಯರು ಕೊಟ್ಟಿದ್ದಾರೆ. ಅದನ್ನು ಕೂಡ ಈ ತಿದ್ದುಪಡಿಯಲ್ಲಿ ಅಳವಡಿಸಿ ಕೊಂಡಿದ್ದೇವೆ. ದಯಮಾಡಿ ತಾವು ಅದಕ್ಕೆ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಕಟ್ ಆಫ್ ಡೇಟ್ ಎಂದು ಹೇಳುತ್ತೀರಿ, ಜನವರಿ ಒಂದು 1995ಕ್ಕೆ ಯಾರ್ಯಾರು ಆ ಜಾಗದಲ್ಲಿ ಕಟ್ಟಿಕೊಂಡಿದ್ದರು, ಎಷ್ಟೆಷ್ಟು ಎನ್ನುವುದಕ್ಕೆ ನಿಮ್ಮ ಹತ್ತಿರ ಏನಾದರೂ ದಾಖಲೆ ಇದೆಯಾ? 1-1-1995ರಲ್ಲಿ ಇವರು ಅಸ್ತಿತ್ವದಲ್ಲಿದ್ದರು ಎನ್ನುವುದಕ್ಕೆ ಏನು ದಾಖಲೆ ಇದೆ, ಇದನ್ನು ಕಂಡು ಹಿಡಿಯುವುದಕ್ಕೆ ನಿಮ್ಮ ಬಳಿ ಇರುವ ವ್ಯವಸ್ಥೆ ಏನು? ಇವರು 1-1-95ರಲ್ಲಿ ಇದ್ದರು 2-1-95ರಲ್ಲಿ ಇರಲಿಲ್ಲ ಎನ್ನುವುದಕ್ಕೆ ದಾಖಲೆ ಏನು? What is the way out?

+ ಶ್ರೀ ಜೆ.ಸಿ. ಮಾಧುಸ್ವಾಮಿ : (ಚಿಕ್ಕ ನಾಯಕನಹಳ್ಳಿ) 38 'ಸಿ' ಏನು ಈ ಶಾಸನ ಸಭೆಯಲ್ಲಿ ಪಾಸಾಯಿತು ಅವತ್ತೂ ಕೂಡ ನಾವು ಶಾಸಕರಾಗಿ ಇಲ್ಲಿ ಇದ್ದೆವು. 38 'ಸಿ' ಯನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿದ ದಿವಸ ಈ ತರಹ ಯಾರು ತೊಂದರೆಗೆ ಒಳಗಾಗಿದ್ದಾರೆ ನಿಜವಾದ ಜಮೀನಿನ ಮಾಲೀಕರಾಗಿ ಇದ್ದುಕೊಂಡು ಅಲ್ಲಿ ಅನ್ಯಾಯಕ್ಕೆ ಸಿಕ್ಕಿದ್ದಾರೆ ಅವರಿಗೆ ಏನಾದರೂ ಸಹಾಯ ಮಾಡಬೇಕೆನ್ನುವ ದೃಷ್ಟಿಯಲ್ಲಿ ಬಹುಶಃ ಮಸೂದೆಯನ್ನು ಪಾಸ್ ಮಾಡಿ ಕೊಟ್ಟರು. 14ನೇ ಫೆಬ್ರವರಿ 1994 ರಿಂದ 17ನೇ ಫೆಬ್ರವರಿ ರಿಪೋರ್ಟಿನಲ್ಲಿ ಮತ್ತು ಮಾರ್ಚ್ 21ರ ಹೈಕೋರ್ಟಿನ ರಿಪೋರ್ಟ್‌ನಲ್ಲಿ ಅದು ಅಡಕವಾಗಿದೆ. ನಾನು ಓದುವುದಕ್ಕೆ ಹೋಗುವುದಿಲ್ಲ. ಅವತ್ತೂ ಕೂಡ ಇದೇ ಉದ್ದೇಶ ಇಟ್ಟುಕೊಂಡು ಈ ಮಸೂದೆ ಪಾಸ್ ಮಾಡಿಕೊಡಬೇಕೆಂದು ಸನ್ಮಾನ್ಯ ಮೊಯಿಲಿಯವರು ಸನ್ಮಾನ್ಯ ಲಕ್ಕಪ್ಪನವರ ಕಡೆಯಿಂದ ಅವತ್ತಿನ ಶಾಸನಸಭೆ ಸದಸ್ಯರಾಗಿದ್ದು ಈ ಮಸೂದೆ ಪಾಸ್ ಮಾಡಿಸಿದರು. ಅವತ್ತು ಸ್ಪಷ್ಟವಾಗಿತ್ತು. 1986ನೇ ಇಸವಿಯವರೆಗೆ ಯಾರು ಆಕಸ್ಮಿಕವಾಗಿ ಅನಧಿಕೃತವಾಗಿ ಅಲ್ಲಿದ್ದಾರೆ, ಯಾರು ಜಮೀನು ಮಾಲೀಕರಿದ್ದಾರೆ ಅವರಿಗೆ 38 'ಸಿ' ಕೆಳಗೆ ನಾವು ಜಮೀನನ್ನು ವಾಪಸ್ ಕೊಡುವುದು ಅಥವಾ ಅದು ಅಯೋಗ್ಯವಾಗಿದ್ದರೆ, ಅದು ನಾಲಾಯಕ್ ಜಮೀನಾಗಿದ್ದರೆ ಸೈಟ್ ಫಾರಂ ಮಾಡುವುದಕ್ಕೆ ಅಂತಹ ಜಮೀನನ್ನು ಬಿಡಿಎನವರು ವಾಪಸ್ ಕೊಡಬೇಕೆಂದು 38 'ಸಿ' ಯಲ್ಲಿ ಅವರು ಅಡಕ ಮಾಡಿ ಮಸೂದೆಯನ್ನು ಪಾಸ್ ಮಾಡಿಕೊಂಡರು. ದುಃಖದಿಂದ ಹೇಳಬೇಕಾಗುತ್ತದೆ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎರಡು ಕಡೆ ರೀಕನ್‌ವೇ ಮಾಡಬಾರದು ಎಂದು ನಿರ್ಧಾರ ಆಗಿರುವಂತಹ ತೀರ್ಮಾನ. ಯಾರಿಂದ "Once if a property is acquired for a public purpose. it

will not lie in the mouth of a acquiring authority to reconvey it back" ಎಂದು ಕರ್ನಾಟಕ ಹೈಕೋರ್ಟಿನಲ್ಲಿ ಒಂದು ತೀರ್ಪಾಗಿತ್ತು. ನಮ್ಮ ಸರ್ಕಾರದವರೇ ಹೈಕೋರ್ಟಿಗೆ ಹೋದಾಗ ಇವರ ಪರವಾಗಿ ಆಯಿತು. ಯಾರೋ ಕ್ಯೂಶ್ಚನ್ ಮಾಡಿ ರೀಕನ್‌ವೇ ಮಾಡಿ ಎಂದು ಹೇಳಿದಾಗ ಅದು ಆದನಂತರ ಮತ್ತೆ ಇದರ ತುರ್ತು ಸ್ಥಿತಿ ನನಗೆ ಅರ್ಥವಾಗಿಲ್ಲ. ಇದರಲ್ಲಿ ಸುಮಾರು 20 ರಿಂದ 23,000 ಇದರಲ್ಲಿ ಬೆನಿಫಿಟ್ ಪಡೆದಿದ್ದಾರೆ. ಸನ್ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ 38 'ಬಿ' ಮತ್ತು 'ಸಿ' ಎರಡು ಕ್ಲಾಸನ್ನು ಇನ್‌ಸರ್ಟ್ ಮಾಡಿಕೊಂಡು ನಾವು ಅವರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ಅಂದರೆ 1995ನೇ ಇಸವಿವರೆಗೆ ಬಂದಿರುವವರಿಗೆ ನಾವು ಎಕ್ಸ್‌ಟೆಂಡ್ ಮಾಡುತ್ತೇವೆ ಎಂದು ಈ ಬಿಲ್‌ನಲ್ಲಿ ತಂದು ನ್ಯಾಯಾಂಗಕ್ಕೆ ಮತ್ತು ಶಾಸಕಾಂಗಕ್ಕೆ ಇಷ್ಟೊಂದು ಅಗೌರವ ತೋರಿಸಬೇಕೆಂದು ಅರ್ಥವಾಗಿಲ್ಲ. ನಾನು ಬಹಳ ದೊಡ್ಡ ಲಾಯರ್‌ಗಿರಿ ಮಾಡದೆ ಇದ್ದರೂ ಅಜ್ಞಾನಿ ಅಲ್ಲ. ಸ್ವಲ್ಪ ಲಾಯರ್ ಎಂದು ಅನ್ನಿಸಿಕೊಂಡಿದ್ದವನು. ಒಂದು ಮಾತನ್ನು ತಮ್ಮ ಮಾಹಿತಿಗೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು ವಿಲ್ ಮಾಡುವುದಾಗಲಿ, ಜಿಪಿಎ ಕೊಡುವುದಾಗಲಿ, ಯಾರಿಗೂ ಟೈಟಲ್ ಟ್ರಾನ್ಸ್‌ಫರ್ ಮಾಡುವ ಅಥಾರಿಟಿ ಸೃಷ್ಟಿ ಮಾಡುವುದಿಲ್ಲ. it will not create a permanent document. ವಿಲ್ ಮಾಡಿದವರು, ವಿಲ್ ಮಾಡಿರುವವನು ಬದುಕಿರುವ ಕಾಲದಲ್ಲಿ ನಾನೇದರೂ ಕಂಟೆಂಪ್ಟ್ ಆಫ್ ದಿ ವಿಲ್ ವಿತ್‌ಡ್ರಾ ಮಾಡಿದ್ದೇನೆಂದರೆ, ಅಮೆಂಡ್ ಮಾಡಿದ್ದೇನೆಂದರೆ, ಮಾಡಿಫೈ ಮಾಡಿದ್ದೇನೆ ಎಂದರೆ ನಾವು ಒಪ್ಪಬೇಕಾಗುತ್ತದೆ. ಜಿಪಿಎ ಕೂಡ ಅಷ್ಟೆ ಜನರಲ್ ಪವರ್ ಆಫ್ ಅಟಾರ್ನಿ ಯಾರಿಗಾದರೂ ಕೊಟ್ಟರೆ ಅವನು ಅಫೇರ್ಸ್‌ನ್ನು ಮ್ಯಾನೇಜ್ ಮಾಡುವುದಕ್ಕೆ ಪ್ರಾಪರ್ಟಿ ಮೇಲೆ ತಾತ್ಕಾಲಿಕವಾದ ಹಕ್ಕನ್ನು ಮಾತ್ರ ನಾವು ಕೊಡುತ್ತೇವೆ. ದುರಾದೃಷ್ಟ ಈ ಸರ್ಕಾರ ಇವತ್ತು ಜಿಪಿಎ ಹೋಲ್ಡರ್ ಯಾರಿದ್ದಾರೆ ಅವನಿಗೆ ಟೈಟಲ್ ಕ್ರಿಯೇಟ್ ಮಾಡಿ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಅಥವಾ ಅವನಿಗೆ ರಿ ಕನ್‌ವೇ ಮಾಡಿ ಅದನ್ನು ಕನ್‌ಫರ್ಮ್ ಮಾಡುತ್ತೇವೆ ಎಂದು ಹೇಳುತ್ತೀರಿ. ಒಂದೇ ಒಂದು ಸಣ್ಣ ಪ್ರಶ್ನೆ ನಾನು ಅವರಿಗೆ ಕೇಳುವುದು ದೂರವಾಯಿತು, ಪಾಸ್ ಮಾಡಲೇ ಬೇಕೆನ್ನುವ ನಿರ್ಣಯಕ್ಕೆ ಬಂದಿರುವುದರಿಂದ ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಯಾರಿಗೋ ಜಿಪಿಎ ಮಾಡಿಕೊಟ್ಟಿರುತ್ತೇನೆ, ನೀವು ಆ ಜಮೀನನ್ನು ಕನ್‌ಫರ್ಮ್ ಮಾಡಿದ ಮೇಲೆ ನನ್ನ ಜಿಪಿಎ ವಾಪಸ್ ತೆಗೆದುಕೊಂಡ ಮೇಲೆ ನಿಮ್ಮ ಸ್ಥಿತಿ ಏನು? ಕೋರ್ಟಿನಲ್ಲಿ ನಿಂತು ಯಾರಿಗೆ ಉತ್ತರ ಹೇಳುತ್ತೀರಿ ?

It I am going to withdraw the G.P.A., to whom I have given the G.P.A., what is the position of the authority which has confirmed either the land or the house on that land to a particular individual ? ಖಾತೆ ಮಾಡಿ ಕೊಟ್ಟು ಬಿಡಿ, ಜಿಪಿಎ ಇರುವವನಿಗೆ, ವಿಲ್ ಮಾಡಿ ಕೊಟ್ಟವನಿಗೆ ಖಾತೆ ಮಾಡಿ ಕೊಡಿ, ಎಂದು ಈ ಸರ್ಕಾರ ಇನ್ನೊಂದು ಶಾಸನ ತರಬೇಕಾಗುತ್ತದೆ. ನಾವು ತಿಳಿದಿರುವ ಪ್ರಕಾರ that is a temporary power, temporary authority given till my wish is there. If I withdraw my authority ಅನಂತರ ಅವನ ಸ್ಥಿತಿ ಏನು ? he will not be the owner of that land.

ನೀವು ಅವನಿಗೆ ಓನರ್‌ಶಿಪ್ ಟೈಟಲ್ ಕನ್‌ಫರ್ಮ್ ಮಾಡಿರುತ್ತೀರಿ, ಇಂತಹ ಶಾಸನಗಳು ಶಾಸನಸಭೆಯಲ್ಲಿ ಇಷ್ಟೊಂದು ತುರ್ತಾಗಿ ಪಾಸ್ ಆಗಬೇಕೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಕಡೆ ಸುಮಾರು ಒಂದೂವರೆ ಲಕ್ಷ ರೆಸಿಡೆಂಟ್ಸ್‌ಗೆ ಬೆನಿಫಿಟ್ ಆಗುತ್ತದೆ ಎಂದು ನನಗೆ ಮಾಹಿತಿ ಇದೆ. ನಾನು ಒಂದು ಮಾತು ಕೇಳುತ್ತೇನೆ, ಅಕಸ್ಮಾತ್ ಅದು ಏನಾದರೂ ಪಾಸ್ ಮಾಡಿದರೆ ನಿಮ್ಮ ಟೌನ್ ಪ್ಲ್ಯಾನಿಂಗ್ ಅಥಾರಿಟಿ ಪ್ರಶ್ನೆ ಏನು? ಬಿಡಿಎನವರು ಲೇಔಟ್ ಇದೆಯಾ, ಮಾಡುತ್ತಾರಾ, ಮಾಡುವುದಕ್ಕಾಗುತ್ತಾ, ಒಂದು ಲಕ್ಷ ಚಿಲ್ಲರೆ ಮನೆಗಳ ಬಗ್ಗೆ ನೀವು ಇವತ್ತು ಏನೂ ಪ್ಲ್ಯಾನಿಂಗ್ ಇಲ್ಲದೆ ನಾವು ಸೈಟ್ ಬಗ್ಗೆ ಅನಧಿಕೃತವಾಗಿರುವವರಿಗೆ ಖಾಯಂ ಮಾಡುತ್ತೇವೆಂದರೆ, ನಿಮಗೆ ರೋಡ್ ಮಾಡುವವರು ಯಾರು, ಸರ್ವೀಸಸ್ ಹೇಗೆ ಕೊಡುತ್ತೀರಿ How are you going to create the basic amenities to those areas ? ಎರಡನೇ ಪ್ರಶ್ನೆ ಇವರೆಲ್ಲ ಅಲ್ಲಿ ಇವರ ಪ್ರಕಾರ 1995ರವರೆಗೆ ವಾಸವಾಗಿರುವವರು ಆಗಿರಬೇಕೆಂದು ಹೇಳುತ್ತೀರಿ. ಇಲ್ಲಿ ಬಂದವರಿಗೆ ಪವರ್ ಸಪ್ಲೈ ಕೊಟ್ಟವರು ಯಾರು? ಈ ವರೆಗೆ ವಾಟರ್ ಸಪ್ಲೈ ಕೊಟ್ಟವರು ಯಾರು ? ನಿಮಗೆ ಅಥಾರಿಟಿ ಇರಲಿಲ್ಲವಾ? ಬೆಂಗಳೂರು ಸಿಟಿಯಲ್ಲಿ ಹೇಳುವವರು ಕೇಳುವವರು ಯಾರೂ ಇರಲಿಲ್ಲವಾ, ಇದು ಸರ್ಕಾರದಲ್ಲಿ ನಡೆದಿರಲಿಲ್ಲವಾ ? ಇದು ಏನು, ಐದು ಮನೆ ಅಲ್ಲ 10 ಮನೆ ಅಲ್ಲ, ಒಂದೇ ಒಂದು ಬಡಾವಣೆಯಲ್ಲಿ 3,000 ಮನೆ ನಂದಿನಿ ಲೇಔಟ್‌ನಲ್ಲಿ 2,900 ಚಿಲ್ಲರೆ ಮನೆಗಳನ್ನು ನೀವು ಈ ಕಾನೂನಿನ ಕೆಳಗಡೆ ತಯಾರು ಮಾಡುವುದಕ್ಕೆ ಹೋಗಿದ್ದೀರಿ. ನಾನು ಒಬ್ಬ ಇಂಡಿಪೆಂಡೆಂಟ್ ಸದಸ್ಯ. Let me not be a party for this ? I know the position of my speech. ನಾನು ನಿಮಗೆ ಹೇಳುತ್ತೇನೆ, ಅಕ್ವಿಸಿಷನ್ ಆದಮೇಲೆ ಹಿಂದಿನ ಡೇಟ್ ಹಾಕಿ ಜಿಪಿಎ ಕೊಟ್ಟಿದ್ದಾರೆ. ಅಕ್ವಿಸಿಷನ್ ಆದ ಮೇಲೆ ಬೇರೆಯವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅವರನ್ನೆಲ್ಲಾ ನಾವು ಖಾಯಂ ಮಾಡುತ್ತಾ ಹೋದರೆ ಒಂದು ಕಾಲದಲ್ಲಿ 1986ರವರೆಗೆ ಆಗಿದ್ದನ್ನು ಖಾಯಂ ಮಾಡಿ ಕ್ಲೋಸ್ ಮಾಡಬೇಕೆಂದು 38 'ಸಿ' ಯನ್ನು ಇಂಟ್ರಡ್ಯೂಸ್ ಮಾಡಿ ಇವತ್ತು ಮತ್ತೆ ಬಂದು 1999 ರವರೆಗೆ ಮತ್ತೆ ಯಾರ್ಯಾರು ಇದ್ದಾರೆ ಅವರಿಗೆ ಖಾಯಂ ಮಾಡುತ್ತೇವೆಂದರೆ, ದಯವಿಟ್ಟು ನೀವು ನಿಮ್ಮ ಬಿಡಿಎ ಬಂದ್ ಮಾಡಿ. ಯಾರ್ಯಾರಿಗೆ ಇಚ್ಛೆ ಬರುತ್ತದೆ, ಅವರಿಗೆ ಎಲ್ಲಿ ಬೇಕೋ ಅಲ್ಲಿ ಕಟ್ಟಿಕೊಳ್ಳುತ್ತಾರೆ. ಕಾರ್ಪೋರೇಷನ್ ಇಲ್ಲ ಇನ್ನು ಯಾರಿಗಾದರೂ ಹೇಳಿ, ಅವರಿಗೆ ಒಂದಷ್ಟು ಪೆನಾಲ್ಟಿ ಹಾಕಿ ಸರ್ವೀಸ್‌ಸ್ ಕೊಡಿ. ಯಾರ್ಯಾರು ಎಲ್ಲೆಲ್ಲಿ ಕಟ್ಟಿರುತ್ತಾರೆ ಆಯಾ ಮನೆಗಳಿಗೆ ಖಾಯಂ ಮಾಡಿ ಖಾತೆ ಮಾಡಿಕೊಂಡು ಪಟ್ಟ ಕೊಟ್ಟುಕೊಂಡು ಹೋಗಿ. ಒಂದು ಕಡೆ ಬಿಡಿಎ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಯಾರೋ ಅನಧಿಕೃತವಾಗಿ ಇರತಕ್ಕಂಥದ್ದಕ್ಕೆ ನಾವು ಕೊಡಲೇಬೇಕೆಂದು ಹಠ ಹಿಡಿದುಕೊಂಡು ಒಂದು ವಾರದಲ್ಲಿ ಈ ಬಿಲ್ ಇಂಟ್ರಡ್ಯೂಸ್ ಮಾಡುವಂತಹ ಎಮರ್ಜೆನ್ಸಿ ಈ ಬಿಲ್‌ಗೆ ಏನಿತ್ತು ನನಗೆ ಅರ್ಥವಾಗುತ್ತಿಲ್ಲ. ನಾಳೆ ಈ ದೇಶದ ಮೇಲೆ ಯಾವುದೋ ಸ್ಟ್ರೈಲ್ಯಾಬ್ ಬೀಳುವ ಸ್ಥಿತಿ ಇರಲಿಲ್ಲ. ಜೂನ್‌ವರೆಗೆ ಪರಾಮರ್ಶೆ ಮಾಡಬಹುದಾಗಿತ್ತು. ಯಾರನ್ನಾದರೂ ನಾಲ್ಕು ಜನರಿಗೆ ಕೂರಿಸಿಕೊಂಡು ಕೇಳಬಹುದಾಗಿತ್ತು. ಇದರಲ್ಲಿ ಬೇಕಾದಷ್ಟು ಪ್ರಿಸಿಡೆಂಟ್ಸ್ ಕೋರ್ಟಿನಲ್ಲಿ ನಡೆದಿದೆ. ಇವೆಲ್ಲಾ ವಿವೇಚನೆ ಮಾಡದೆ, ಏಕಾಏಕಿ ಈ ಬಿಲ್ ಪಾಸ್ ಮಾಡಲೇಬೇಕೆಂದರೆ ಬಹುಶಃ

ಸಾರ್ವಜನಿಕ ದೃಷ್ಟಿಯಲ್ಲಿ ನಾವೆಲ್ಲಾ ಶಾಸಕರಾಗಿ ಯಾವ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದೇವೆಂದು ತಮಗೆ ಅರ್ಥವಾದರೆ ನನ್ನ ಜವಾಬ್ದಾರಿ ಮುಗಿಯಿತು ಎಂದು ತಿಳಿದುಕೊಂಡಿದ್ದೇನೆ. ತಮ್ಮ ಕಾಲದಲ್ಲಿ ಇಂತಹ ಬಿಲ್ಲನ್ನು ಪಾಸ್ ಮಾಡುವುದು ಯೋಗ್ಯವಲ್ಲವೆಂದು ನನ್ನ ಭಾವನೆ. ತಾವು ಇದನ್ನು ಅರ್ಥ ಮಾಡಿಕೊಳ್ಳುತ್ತೀರಿ. ಒಂದು ಲಕ್ಷ ಚಿಲ್ಲರೆ ಮನೆಗಳನ್ನು ಇವತ್ತಿಗೆ ಖಾಯಂ ಮಾಡುವುದಕ್ಕೆ ಹೊರಟಿದ್ದಾರೆ. ಒಂದು ಲಕ್ಷ ಚಿಲ್ಲರೆ ಮನೆ ಬೆಂಗಳೂರು ಸಿಟಿಯಲ್ಲಿ ಖಾಯಂ ಆದರೆ, ಟೈಟಲ್ ಇಲ್ಲದೆ, ಓನರ್‌ಶಿಪ್ ಇಲ್ಲದೆ, a slip of letter, a G.P.A., ಅಷ್ಟು ಆಧಾರದ ಮೇಲೆ ಇವತ್ತು ನಾವು ಅವನಿಗೆ ರೈಟ್ ಕ್ರಿಯೇಟ್ ಮಾಡುತ್ತಿದ್ದೇವೆಂದರೆ, ಇದಕ್ಕಿಂತ ಕೆಟ್ಟ ಶಾಸನ ಬಹುಶಃ ಈ ಶಾಸನ ಸಭೆಯ ಇತಿಹಾಸದಲ್ಲಿ ಯಾವುದೂ ಇರುವುದಿಲ್ಲ ಎಂದು ತಿಳಿದುಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಈ ಬಿಲ್ಲನ್ನು ದಯಮಾಡಿ ವಾಪಸ್ ತೆಗೆದುಕೊಂಡು ಯೋಚನೆ ಮಾಡಿ ಮಂಡಿಸಬೇಕು. ಎರಡನೆಯದು, ನಮ್ಮ ನಾಯಕರು ಎಲ್ಲ ಕಡೆ ನಾಯಕರೂ ಒಪ್ಪಿ ಈ ಬಿಲ್ ತರಲಿ, ಪಾಸ್ ಮಾಡಿಕೊಡಲಿ ಎಂದು ಹೇಳುತ್ತಾರೆ. ಅವರನ್ನು ಇಲ್ಲಿ ಧರಣಿ ಕೂರಿಸಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಇಲ್ಲದ ಹಾಗೆ ಮಾಡಿ ಅವರನ್ನು ಕತ್ತಲಲ್ಲಿ ಇಟ್ಟು ಇಂತಹ ಶಾಸನಗಳನ್ನು ಮಾಡಬಾರದು. ಅಂತಹ ಜರೂರಿ ಈಗ ಇಲ್ಲ. 1995ರಲ್ಲಿ ಇದ್ದ ಮನೆಗಳನ್ನು ಇವತ್ತು ಖಾಯಂ ಮಾಡಲೇಬೇಕು ಎಂದು ಹೇಳುವ ಎಮರ್ಜೆನ್ಸಿ ಇಲ್ಲದೆ ಇದ್ದುದರಿಂದ ದಯಮಾಡಿ ವಿತ್‌ಡ್ರಾ ಮಾಡಬೇಕು. ಇದನ್ನು ಜೂನ್ ತಿಂಗಳಲ್ಲಿ ಮತ್ತೆ ತಂದರೆ ಸೌಜನ್ಯ. ಕಾನೂನು ಸಚಿವರೂ ಕೂಡ ಹೇಳಿದ್ದಾರೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ವಿರೋಧ ಪಕ್ಷದ ಸದಸ್ಯರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ 1-1-1995 ಕ್ಕೆ ಕಟ್ ಆಫ್ ಡೇಟ್ ಮಾಡಿರುವಾಗ ಆಧಾರ ಏನು ? ನಿಮ್ಮ ಹತ್ತಿರ ಒಂದು ಲಿಸ್ಟ್ ಇದೆಯಾ ? ಅದಕ್ಕೆ ಉತ್ತರ ಕೊಡಿ. ಎರಡನೆಯದು ಬಹಳ ಇಂಪಾರ್ಟೆಂಟ್ ಈಗ ಒಂದು ಶ್ರೀ ಮ್ಯಾನ್ ಕಮಿಟಿ ಇದೆ, ರೆವಿನ್ಯೂ ಕಮೀಷನರ್, ಹೆಚ್‌ಯುಡಿ ಕಮೀಷನರ್, ಲಾ ಸೆಕ್ರೆಟರಿ, ಬಿಡಿಎ ಕಮೀಷನರ್, ಮೆಂಬರ್ ಸೆಕ್ರೆಟರಿ ಆಗಿರುತ್ತಾರೆ. ಈ ಒಂದು ಕಮಿಟಿ ಇದೆ, ಆ ಕಮಿಟಿ ಅಪ್ರೂವ್ ಮಾಡಿದ ಇಂತಹ ಪ್ರಕರಣಗಳನ್ನು ಗವರ್ನಮೆಂಟ್‌ಗೆ ಕಳುಹಿಸುತ್ತಿದ್ದೆವು. ಈ ಬಿಲ್ ಆಕ್ಟ್ ಆದ ಮೇಲೆ ಆ ಕಮಿಟಿ ಉಳಿಯುತ್ತಾ ? ನಗರದ ಜನಗಳಿಗೆ ಕಮಿಟಿ ಉಳಿಯಬೇಕು. ಆ ಕಮಿಟಿ ಇದನ್ನೆಲ್ಲಾ ದಾಖಲೆಗಳನ್ನು ನೋಡಿ ಅವರು ಅಪ್ರೂವ್ ಮಾಡಬೇಕು. ಆಗ ಈ ಬಿಲ್‌ಗೆ ಇನ್ನು ಸ್ಯಾಂಕ್ಟಿಟಿ ಬರುತ್ತದೆ. ಆಕ್ಟ್ ಇನ್ನಷ್ಟು ದೃಢವಾಗುತ್ತದೆ. ಈ ಕಮಿಟಿ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೊಡಿ. 1-1-95ರ ಒಂದು ಕ್ಲಾರಿಫಿಕೇಷನ್ ಕೊಡಿ.

+ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, 1-1-1995 ಎಂದು ಏನಿದೆ, ಹಿಂದೆ 1994ರಲ್ಲಿ ಸನ್ಮಾನ್ಯ ವೀರಪ್ಪ ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಹೈಕೋರ್ಟ್‌ನಲ್ಲಿ ರೀಕನ್‌ವೇ ಮಾಡುವುದಕ್ಕಾಗುವುದಿಲ್ಲ ನೀವು ಕಾನೂನು ತಿದ್ದುಪಡಿ ತನ್ನಿ ಎಂದು ಒಂದು ಡೈರೆಕ್ಷನ್ ಬಂದ ಮೇಲೆ 1-1-94ರಲ್ಲಿ 38 'ಸಿ' ಎನ್ನುವುದನ್ನು ತಂದು ಅದರಲ್ಲಿ ಸುಮಾರು 42 ಸೊಸೈಟಿಯವರು ಏನು

ಕೆಲವು ವರದಿಗಳ ಆಧಾರದ ಮೇಲೆ, ಕಮಿಟಿಗಳ ಆಧಾರದ ಮೇಲೆ ತಂದರು. ಅವುಗಳನ್ನು ರೆಗ್ಯುಲರೈಸ್ ಮಾಡತಕ್ಕಂತಹ ಸಂದರ್ಭದಲ್ಲಿ ಆವತ್ತು ಸಾರ್ವಜನಿಕವಾಗಿ ಬಿಡಿಎನಲ್ಲಿ ಅನಧಿಕೃತವಾಗಿ ಕಟ್ಟಿರತಕ್ಕಂತಹ ಅರ್ಜಿಗಳು ಎಷ್ಟು, ಇಂಡಿವಿಜ್ಯುಯಲ್ಲಾಗಿ ಎಷ್ಟು ಜನ ಇದ್ದಾರೆ ಏನು ಎನ್ನುವುದನ್ನು ಸರ್ಕಾರ ಪ್ರಕಟಣೆ ಮಾಡಿದ ಮೇಲೆ 46,000ಕ್ಕೂ ಮೇಲ್ಪಟ್ಟು ಅರ್ಜಿಗಳು ಬಂದಂತಹ ಸಂದರ್ಭದಲ್ಲಿ 38 'ಸಿ' ಯಲ್ಲಿ ಯಾವ್ಯಾವುದು ಈಗಾಗಲೇ ಬಿಡಿಎ ರೆಸಲ್ಯೂಷನ್ ಆಗಿದೆ, ಅಂತಹವರಿಗೆ ರಿಕನ್‌ವೇ ಮಾಡುತ್ತೇವೆ. ಬೇರೆ ಇಂಡಿವಿಜ್ಯುಯಲ್ಲಾಗಿ ರಿಕನ್‌ವೇ ಮಾಡುವುದಕ್ಕಾಗುವುದಿಲ್ಲ ಎನ್ನುವ ತೀರ್ಮಾನವನ್ನು ಆವತ್ತು ಕೊಟ್ಟಂಥ ಸಂದರ್ಭದಲ್ಲಿ ಇಂಡಿವಿಜ್ಯುಯಲ್ ರೀಕನ್‌ವೇ ಆಗಬೇಕಾದರೆ ಪ್ರಾಯಶಃ ಕೆಲವೇ ಕೆಲವು ಸೊಸೈಟಿಗಳಿಗೆ ಮಾತ್ರ ಈ 38 'ಸಿ' ಯಲ್ಲಿ ಅನುಕೂಲವಾಯಿತು.

5.20 ಪಿ.ಎಂ.

ಅದಾದ ಮೇಲೆ ಉಳಿದಿರತಕ್ಕಂಥ ಅರ್ಜಿಗಳು ಇವತ್ತಿಗೂ ಕೂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಹಾಗೇ ಇವೆ. ತಾವು ಒಂದು ಕಮಿಟಿಯ ಬಗ್ಗೆ ಕೇಳಿದಿರಿ. ಆ ಕಮಿಟಿಯ ಬಗ್ಗೆ ಕೊನೆಯಲ್ಲಿ ಹೇಳುತ್ತೇನೆ. ಸನ್ಮಾನ್ಯ ಮಾಧುಸ್ವಾಮಿಯವರು ಹೇಳಿದರು, ಸುಮಾರು ಒಂದು ಲಕ್ಷ ಅನಧಿಕೃತ ಕಟ್ಟಡಗಳಿವೆ, ಅವರಿಗೆ ಕೆ.ಇ.ಬಿ. ಲೈನ್ ಕೊಟ್ಟವರ್ಯಾರು, ಕುಡಿಯುವ ನೀರು ಕೊಟ್ಟವರ್ಯಾರು ಎಂದು ಕೇಳಿದರು. ಇದು ಸುಮಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದು ಏಕೆ ನಡೆಯಿತು ಎನ್ನುವುದಕ್ಕೆ ಹೆಚ್ಚಿನ ವಿವರಣೆ ಕೊಡಲು ನನಗೆ ಮಾಹಿತಿ ಇಲ್ಲದಿದ್ದರೂ ಕೂಡ, ಹೇಳುತ್ತಿದ್ದೇನೆ. ಪ್ರಾಯಶಃ ಬೆಂಗಳೂರಿನ ಸರಹದ್ದು ವಿಸ್ತರಣೆಯಾಗುತ್ತಿರುವ ಸಂದರ್ಭದಲ್ಲಿ ಒಂದು ಎಕರೆ ಜಮೀನನ್ನು 80 ಸಾವಿರ, ಒಂದು ಲಕ್ಷ, ಒಂದೂವರೆ ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡು ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರು. ಇದು ಬಿ.ಡಿ.ಎ. ನವರಿಗೆ ಗೊತ್ತಿದ್ದರೂ, ಕೆಲವು ಕಡೆ ಡೆವಲಪ್‌ಮೆಂಟ್ ಆಗಿರುವುದು ಇದ್ದರೂ ಕೂಡ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೇ, ಕೆಲವು ಫೋರ್ಸಬಲಿ ಅಕ್ವಿಸಿಷನ್ ಮಾಡಿಕೊಂಡರು. ಹಾಗೆ ಅಕ್ವಿಸಿಷನ್ ಮಾಡಿಕೊಂಡಂಥ ಸಂದರ್ಭದಲ್ಲಿ ಮಾಲೀಕರ ಒಪ್ಪಿಗೆಯನ್ನೂ ಸರಿಯಾಗಿ ಪಡೆಯದೆ ಡೀಮ್ಡ್ ಟು ಬಿ ಅಕ್ವೈರ್ಡ್ ಎನ್ನುವ ಪರಿಸ್ಥಿತಿಯಲ್ಲಿ ಫಿಸಿಕಲಿ ಪೊಸಿಷನ್ ತೆಗೆದುಕೊಳ್ಳದೇ ಇದ್ದಂಥ ಸಂದರ್ಭದಲ್ಲಿ ಮಾಲೀಕರು ಆ ಜಮೀನನ್ನು ಸೈಟುಗಳನ್ನಾಗಿ ಮಾಡಿರತಕ್ಕಂಥಾದ್ದು ಸಹಜವಾಗಿದೆ. ಜನರಲ್ ಪವರ್ ಆಫ್ ಅಟಾರ್ನಿ ಮಾಡಿರತಕ್ಕಂಥ ವಿಚಾರಗಳಲ್ಲಿ ಏನಾಯಿತೆಂದರೆ, ಬಿ.ಡಿ.ಎ. ನಿಂದ ಅಕ್ವಿಸಿಷನ್ ಆಗಿರುವ ಜಮೀನುಗಳ್ಯಾವುದೂ ರಿಜಿಸ್ಟ್ರೇಷನ್ ಆಗಿಲ್ಲ ಎನ್ನುವ ಭಾವನೆಯಿತ್ತು. ಈ ರೀತಿಯಾಗಿ ಸಾವಿರಾರು ಮನೆಗಳು ಅನಧಿಕೃತವಾಗಿ ಬಂದಿವೆ. ಅವರಿಗೆ ಈಗಾಗಲೇ ನಾವು ಕುಡಿಯುವ ನೀರನ್ನು ಕೊಟ್ಟಿದ್ದೇವೆ, ಕೆಲವು ಕಡೆ ಅಲ್ಲಲ್ಲಿ ರಸ್ತೆಗಳೂ ಆಗಿವೆ. ಕೆಲವು ಕಡೆ ಒಳಚರಂಡಿ ವ್ಯವಸ್ಥೆಯೂ ಆಗಿದೆ. ಆದರೆ ಇವರ್ಯಾರಿಗೂ ಸರಿಯಾದ ಟೈಟಲ್ ಡೀಡ್ ಇಲ್ಲ. ಈ ಮನೆಗಳನ್ನು ಒಡೆದು ಹಾಕಬೇಕು ಎಂದು ಹೈಕೋರ್ಟ್‌ನ ಡಿಸಿಷನ್ ಆಯಿತು. ಈ ಸಾವಿರಾರು ಮನೆಗಳನ್ನು ಮಾನವೀಯತೆಯ ದೃಷ್ಟಿಯಿಂದ ಒಡೆದು ಹಾಕಲು ಆಗುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತಮ್ಮದೇ ಆದಂಥ ಉದ್ಧಟತನದಿಂದ ಇವುಗಳೆಲ್ಲವನ್ನು

ಅಕ್ವಿಸಿಷನ್ ಮಾಡಿಕೊಂಡು, ಕಟ್ಟಿರತಕ್ಕಂಥ ಮನೆಗಳನ್ನು ಒಡೆದು ಹಾಕಲು ಆಗುವುದಿಲ್ಲ. ಇವರಿಗೆ ಮನೆಯಿಲ್ಲ ಎನ್ನುವ ಭಾವನೆಯಿಂದ 1994ರಲ್ಲಿ ಹಿಂದೆ ಇದ್ದಂಥ ಸರ್ಕಾರದವರು ಮಾಡಿದ್ದಾರೆ ಎಂದು ನಾವು ಇದನ್ನು ಮಾಡಿದ್ದರಿಂದ ಇಂಡಿವಿಜ್ಯುಯಲ್ ಕೇಸಸ್‌ಗಳಲ್ಲಿ ಅಂದರೆ 20 x 30, 30 x 40, 40 x 60 ವಿಸ್ತೀರ್ಣದ ಪ್ರದೇಶದಲ್ಲಿ ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರಿಗೆ ಅನುಕೂಲವಾಗುತ್ತದೆ. ಹಿಂದೆ ಬಂದಿದ್ದಂಥ 46 ಸಾವಿರಕ್ಕೂ ಮೇಲ್ಪಟ್ಟು ಅರ್ಜಿಗಳಲ್ಲಿ ಕೇವಲ 12 ಸಾವಿರ ಅರ್ಜಿಗಳನ್ನು 38-ಸಿ ಯಲ್ಲಿ ಮಾಡಿದ್ದರಿಂದ, ಇಂಡಿವಿಜುಯಲ್ ಕೇಸ್‌ಗಳಲ್ಲಿ ಮಾಡಲು ಆಗುವುದಿಲ್ಲ, ಬಿ.ಡಿ.ಎ. ನಲ್ಲಿ ರೆಸಲ್ಯೂಷನ್ ಆಗಿಲ್ಲ, ಅಂಥವನ್ನು ನಾವು ಮಾಡುವುದಿಲ್ಲ ಎಂದು ಹೇಳಿದ್ದರಿಂದ, ಇವತ್ತು ನಾವು 38-ಡಿ ಯನ್ನು ತರುತ್ತಿದ್ದೇವೆ. ಇದನ್ನು ತರುತ್ತಿರತಕ್ಕಂಥ ಉದ್ದೇಶವೆಂದರೆ, ಬೆಂಗಳೂರಿನಲ್ಲಿರತಕ್ಕಂಥ ಬಹುತೇಕ ಮನೆಗಳಿಗೆ ಖಾತೆ ಇಲ್ಲ, ಕಂದಾಯ ಇಲ್ಲ. ಮತ್ತು ಅವರಿಗೆ ಎಲ್ಲಾ ಸವಲತ್ತುಗಳನ್ನು ಕೊಡಲಾಗಿದೆ. ಅವರಿಂದ ಸರ್ಕಾರಕ್ಕಾಗಲೀ, ಬಿ.ಡಿ.ಎ. ಗಾಗಲೀ ಯಾವುದೇ ರೀತಿಯ ಆದಾಯವಿಲ್ಲ. ಅವರಿಗೆ ಸರಿಯಾದ ಟೈಟಲ್ ಡೀಡ್ ಇಲ್ಲದೇ ಇರತಕ್ಕಂಥಾದ್ದನ್ನು ಮನಗಂಡು ನಾವು ಈ ಕೆಲಸವನ್ನು ಮಾಡಿದ್ದೇವೆ. ಅವನು ಯಾವ ಪೊಸಿಷನ್‌ನಲ್ಲಿದ್ದಾನೆ ಎಂದು ಯಾವ ರೀತಿ ಗುರುತಿಸಿದಿರಿ ಎಂದು ಕೇಳಿದರು. ಬಿ.ಡಿ.ಎ.ನವರು ಜಮೀನನ್ನು ಅಕ್ವಿಸಿಷನ್ ಮಾಡಿಕೊಂಡ ಮೇಲೆ ಗುರುತಿಸಿದಿರಿ ಎಂದು ಕೇಳಿದರು. ಬಿ.ಡಿ.ಎ ನವರು ಜಮೀನನ್ನು ಅಕ್ವಿಸಿಷನ್ ಮಾಡಿಕೊಂಡ ಮೇಲೆ ಓನರ್ ಆದಂಥವನಿಗೆ ಹಣ ಡೆಪಾಸಿಟ್ ಮಾಡಿದ್ದಾರೆ. ಆದರೆ ಅವನು ಅದನ್ನು ತೆಗೆದುಕೊಂಡಿರುವುದಿಲ್ಲ. ಅವನು ಬೇರೆಯವರಿಗೆ ಬಲ್ಕ್ ಆಗಿ ಜಿ.ಪಿ.ಎ. ಮಾಡಿರುತ್ತಾನೆ. ಜಿ.ಪಿ.ಎ. ಆಗಿರತಕ್ಕಂಥವನು ಮತ್ತೊಬ್ಬರಿಗೆ ಜಿ.ಪಿ.ಎ. ಮಾಡಿರುತ್ತಾನೆ. ಅಂಥ ಜಮೀನಿನಲ್ಲಿ ಬಡವ ಮತ್ತು ಮಧ್ಯಮ ವರ್ಗದವರು ಮನೆಗಳನ್ನು ಕಟ್ಟಿಕೊಂಡಿದ್ದರೆ ಅಲ್ಲಿಗೆ ಓನರ್ ಹೋಗಿ, ನಾನು ನಿನ್ನ ಜಿ.ಪಿ.ಎ. ಯನ್ನು ವಿತ್‌ಡ್ರಾ ಮಾಡುತ್ತೇನೆ, ನನಗೆ ಇಷ್ಟು ದುಡ್ಡು ಕೊಡು ಎಂದು ಕೇಳುತ್ತಾನೆ. ಈ ರೀತಿಯ ಹಿಂಸೆ ನಮ್ಮನ್ನು ಕಾಡುತ್ತಿದೆ. ಇದಕ್ಕೆ ಏನಾದರೂ ಒಂದು ಸರಿಯಾದ ರೂಪ ಕೊಡಬೇಕಾಗಿದೆ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿರತಕ್ಕಂಥ ಬಹುತೇಕ ಬಡಾವಣೆಗಳಲ್ಲಿ ಇಂಥ ಮನೆಗಳು ಬಂದಿದ್ದು, ಆ ಮನೆಗಳನ್ನು ಕಟ್ಟಿಕೊಂಡಿರುವ ಮಧ್ಯಮ ವರ್ಗದವರಿಗೆ ಆಗತಕ್ಕಂಥ ತೊಂದರೆಯನ್ನು ಮನಗಂಡು 1994ರಲ್ಲಿ ವೀರಪ್ಪಮೊಯಿಲಿಯವರ ಕಾಲದಲ್ಲಿ ತಂದಂಥ ನಿರ್ಣಯ ಕೆಲವು ರೆಸ್‌ಲ್ಯೂಷನ್‌ಗಳಿಗೆ ಮಾತ್ರ ಸೀಮಿತಗೊಳಿಸಿದ್ದರಿಂದ ಆವತ್ತು ಇದ್ದಂಥಾವನ್ನು ಮಾಡಲು ನಾವು ಇದನ್ನು ಮಾಡಿದ್ದೇವೆ. 1-1-1995ಅನ್ನು ಯಾವ ರೀತಿ ನೀವು ಅಳತೆಗೋಲನ್ನಾಗಿ ಮಾಡುತ್ತೀರಿ ಎಂದು ಕೇಳಿದ್ದಾರೆ. 1994ರಲ್ಲಿ ನಾವು ಅರ್ಜಿ ಕರೆದಂಥ ಸಂದರ್ಭದಲ್ಲಿ ಬಂದ ಅರ್ಜಿಗಳು ಮತ್ತು ಈಗಾಗಲೇ ನಾವು ಕೆಲವನ್ನು ಐಡೆಂಟಿಫಿಕೇಷನ್ ಮಾಡಿದ್ದೇವೆ. ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಈಗಾಗಲೇ ಹೇಳಿದ್ದಾರೆ. ಇವೆಲ್ಲ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು ಅವತ್ತಿನ ಚುನಾಯಿತ ಅಫಿಷಿಯಲ್ ಕಮಿಟಿಯೇ ಇದನ್ನು ತಂದದ್ದು. ಅಂದು ಇದ್ದಂಥ ಐ.ಎ.ಎಸ್. ಅಧಿಕಾರಿ ಮತ್ತು ಈಗಿರತಕ್ಕಂಥ ಆಯುಕ್ತರು, ಇವರೆಲ್ಲರೂ ಕುಳಿತುಕೊಂಡು ಇದನ್ನು ಏನಾದರೂ ಮಾಡಿ ಬಗೆಹರಿಸಬೇಕು, ಇವರಿಗೆ ಸರಿಯಾದ ಟೈಟಲ್ ಡೀಡ್ ಇಲ್ಲದೇ ಇರುವುದರಿಂದ ತೊಂದರೆಯಾಗುತ್ತಿದೆ. ಒಂದು ಕಡೆ ಬಿ.ಡಿ.ಎ.

ನವರಿಂದ ಹೆರ್ಯಾಸ್‌ಮೆಂಟ್, ಮತ್ತೊಂದು ಕಡೆ ಕಾರ್ಪೊರೇಷನ್‌ನವರಿಂದ ಹೆರ್ಯಾಸ್‌ಮೆಂಟ್, ಮತ್ತೊಂದು ಕಡೆ ಭೂ ಮಾಲೀಕರಿಂದ ಹೆರ್ಯಾಸ್‌ಮೆಂಟ್ ಆಗುತ್ತಿದೆ. ಇದನ್ನು ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ಇವತ್ತು 38-ಡಿ ಯನ್ನು ತಮ್ಮ ಮುಂದೆ ತಂದಿದ್ದೇವೆ. ಈ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಶಿವರಾಮೇಗೌಡರು ಅದರ ಅಧ್ಯಕ್ಷರಾಗಿದ್ದಾರೆ, ನಾನು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಉದ್ದೇಶವೆಂದರೆ, ಕ್ಯಾನ್ಸರ್ ಕಾಯಿಲೆಯಂತೆ ಹಬ್ಬುತ್ತಿರುವ ಇದನ್ನು ಏನಾದರೂ ಮಾಡಿ ತೆಗೆದುಹಾಕಬೇಕು ಮತ್ತು ಬೆಂಗಳೂರಿನ ಬಡಾವಣೆಗಳಲ್ಲಿ ಇರುವ ನಾಗರೀಕರಿಗೆ ಸೌಲಭ್ಯಗಳನ್ನು ಕೊಡಬೇಕು ಎನ್ನುವುದಾಗಿದೆ. ಅವರಿಗೆ ಸೌಲಭ್ಯಗಳನ್ನು ಕೊಟ್ಟು ಅವರ ಖಾತೆ ಕಂದಾಯಗಳನ್ನು ಮಾಡಿಕೊಡಬೇಕಾಗಿದೆ. ಅಭಿವೃದ್ಧಿ ಶುಲ್ಕವನ್ನು ಅವರಿಂದ ತೆಗೆದುಕೊಳ್ಳಬೇಕಾಗಿದೆ. ಅವರಿಗೆ ಸರಿಯಾದ ಟೈಟಲ್ ಡೀಡ್‌ಗಳನ್ನು ಕೊಡಬೇಕಾಗಿದೆ. ಜಿ.ಪಿ.ಎ. ಮೂಲಕ ಇರತಕ್ಕಂಥ ಬಹುತೇಕ ಮನೆಗಳಿಂದ ಸರ್ಕಾರಕ್ಕೆ ಸ್ಟ್ಯಾಂಪ್ ಡ್ಯೂಟಿಯೂ ಬಂದಿಲ್ಲ. ಇವೆಲ್ಲವನ್ನೂ ಅವಲೋಕನ ಮಾಡಿ, ಇದಕ್ಕೆ ಯಾವುದಾದರೂ ಒಂದು ಸರಿಯಾದ ರೂಪವನ್ನು ಕೊಟ್ಟು, ಇನ್ನು ಮುಂದೆ ಈ ರೀತಿಯಾಗುವುದಕ್ಕೆ ಕಡಿವಾಣ ಹಾಕಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಇವತ್ತು ಸುಮಾರು 5,500 ಎಕರೆಗೆ ಸಂಬಂಧಪಟ್ಟಂತೆ ಕೇಸುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿವೆ. 15-16 ವರ್ಷಗಳಿಂದ ನಾವು ಒಂದು ಎಕರೆ ಜಾಗವನ್ನೂ ಕೂಡ ಅಕ್ವಿಸಿಷನ್ ಮಾಡಿ ಸಾರ್ವಜನಿಕರಿಗೆ ಸೈಟುಗಳನ್ನು ಕೊಟ್ಟಿಲ್ಲ. ಈಗಾಗಲೇ ಇರತಕ್ಕಂಥ ಈ ಕೇಸುಗಳಿಗೆ ಇದು ಅನ್ವಯವಾಗುವುದಿಲ್ಲ. ಯಾರು ಈಗಾಗಲೇ ಕೋರ್ಟಿನಿಂದ ಸ್ಟೇ ಅಥವಾ ಮತ್ತೊಂದು ತಂದು ಮಾಡಿಕೊಂಡಿದ್ದಾರೆ, ಅಂಥವ್ಯಾವುದಕ್ಕೂ ಇದು ಅನ್ವಯವಾಗುವುದಿಲ್ಲ. ಬಡ ಮತ್ತು ಮಧ್ಯಮ ವರ್ಗದವರಿಗೆ ಅನುಕೂಲ ಮಾಡಬೇಕೆಂದು ಇದನ್ನು ತಂದಿರತಕ್ಕಂಥಾದ್ದು. ಇವತ್ತು ಬೆಂಗಳೂರು ನಗರದಲ್ಲಿ ಕೆಲವು ಭಾಗ ಕಾರ್ಪೊರೇಷನ್ನಿಗೆ ಸೇರಿದೆ, ಕೆಲವು ಸಿ.ಎಂ.ಸಿ. ಗೆ ಸೇರಿದೆ, ಮತ್ತೊಂದು ಕಡೆ ಬಿ.ಡಿ.ಎ.ಗೆ ಸೇರಿದೆ. ಅನಧಿಕೃತ ಮನೆಗಳನ್ನು ಕಟ್ಟಿಕೊಂಡು ಈ ಮೂರರ ಮಧ್ಯೆ ತೊಳಲಾಟ ಅನುಭವಿಸುತ್ತಿರತಕ್ಕಂಥವರ ನೋವನ್ನು ಮನಗಂಡು ನಾವು ಇವತ್ತು ಮಾಡಿದ್ದೇವೆ. ನಾವು ಎಕರೆ-ಗಟ್ಟಳೆ ಮಾರತಕ್ಕಂಥಾದ್ದಾಗಲೀ, ಸೊಸೈಟಿಗಳವರಿಗೆ ಖಾತೆ ಕಂದಾಯ ಮಾಡಿಕೊಡತಕ್ಕಂಥಾದ್ದಾಗಲೀ, ರೀಕನ್ಸ್ಟ್ರಕ್ಷನ್ ಮಾಡತಕ್ಕಂಥಾದ್ದಾಗಲೀ ಯಾವುದೂ ಇದರಲ್ಲಿ ಇಲ್ಲ. ನಾವು ಮಾಡುತ್ತಿರತಕ್ಕಂಥಾದ್ದು ಈಗಾಗಲೇ ಬಂದಿರುವಂಥ ಅರ್ಜಿಗಳಿಗೆ. ತಾವು ಮೊದಲು ಒಂದು ಕಮಿಟಿ ಇತ್ತು ಎಂದು ಹೇಳಿದಿರಿ. ಆ ರೀತಿಯ ಕಮಿಟಿ ಇದ್ದರೆ, ನಾವು ಅದನ್ನು ಬೋರ್ಡ್‌ನಲ್ಲಿಟ್ಟು, ಬೋರ್ಡ್‌ನಿಂದ ಸರ್ಕಾರಕ್ಕೆ ಬಂದಾಗ ತೀರ್ಮಾನ ತೆಗೆದುಕೊಳ್ಳುತ್ತೇವೆಯೇ ವಿನಃ ಯಾವುದೇ ಒಂದು ಬೋರ್ಡ್ ಮೀಟಿಂಗಿನಲ್ಲಿ ಎಲ್ಲ ಅಧಿಕಾರವನ್ನು ಅವರಿಗೆ ಕೊಟ್ಟು, ನಾವು ಕಣ್ಣುಮುಚ್ಚಿ ಕುಳಿತುಕೊಂಡು, ಅಲ್ಲಿ ಏನೇನೋ ನಡೆಯತಕ್ಕಂಥ ವ್ಯವಸ್ಥೆಯನ್ನು ಮಾಡಿ ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರಕ್ಕಾಗಲೀ, ಸಾರ್ವಜನಿಕರಿಗಾಗಲೀ ಅನ್ಯಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಇದನ್ನು ತಂದಿಲ್ಲ. ಸುಮಾರು ವರ್ಷಗಳಿಂದ ತೊಂದರೆ ಅನುಭವಿಸುತ್ತಿರುವವರ ನೆರವಿಗೆ ನಿಲ್ಲುವ ಉದ್ದೇಶದಿಂದ ನಾವು ಇದನ್ನು ತಂದಿದ್ದೇವೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ನಾವು ಕ್ಯಾಬಿನೆಟ್ ಸದಸ್ಯರಾಗಿರುವ ಭೈರೇಗೌಡರ ಅಭಿಪ್ರಾಯವನ್ನು ಕೇಳಲು ಬಯಸುತ್ತೇನೆ. 15ನೇ ಫೆಬ್ರವರಿ 1994ರಲ್ಲಿ ಅವರು ಈ ಸದನದಲ್ಲಿ ಆಡಿರುವ ಮಾತು ಈ ರೀತಿ ಇದೆ. "ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿಟ್ಟಿದ್ದ ಪಾರ್ಕುಗಳು, ಶಾಲಾ ಕಟ್ಟಡದ ಜಾಗಗಳು ಮತ್ತಿತರ ಜಾಗಗಳು ಬೆಳಗಾಗುವಷ್ಟರಲ್ಲಿ ಯಾರ್ಯಾರಿಗೋ ಕೊಡಲಾಗಿದೆ. ಬೀದಿ ಭಿಕಾರಿಗಳಾಗಿದ್ದವರು ಇವತ್ತು ಕ್ಯೋಟ್ಯಾಧಿಪತಿಗಳಾಗಿದ್ದಾರೆ. ಇದಕ್ಕೆ ನನ್ನ ಸಂಪೂರ್ಣ ವಿರೋಧವಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ರಾತ್ರೋರಾತ್ರಿ ಇಂಥ ಕಟ್ಟಡಗಳು ಹೇಗೆ ಬರುವುದಕ್ಕೆ ಸಾಧ್ಯ? ಇದರ ಬಗ್ಗೆ ವಿವರಣೆ ಕೊಡಬೇಕು. ಇನ್ನು ಮುಂದಾದರೂ ಬೆಂಗಳೂರು ನಗರ ವ್ಯವಸ್ಥಿತವಾಗಿ ಬೆಳೆಯಲು ವ್ಯವಸ್ಥೆ ಮಾಡಬೇಕು. ಒಂದು ಕಾಲದಲ್ಲಿ ಉದ್ಯಾನ ನಗರ ಎಂದು ಏನು ಕರೆಯಲಾಗುತ್ತಿತ್ತು, ಅದನ್ನು ಇವತ್ತು ಕೊಳಚೆ ಪ್ರದೇಶದ ನಗರವೆಂದು ಹೇಳಬೇಕಾಗಿದೆ." ಇದು ಇವತ್ತಿನ ಸಚಿವ ಸಂಪುಟದಲ್ಲಿ ಪ್ರಭಾವೀ ಸಚಿವರಾಗಿರತಕ್ಕಂಥ, ಏಕಸ್ಮಾತ್ ಉಪಮುಖ್ಯಮಂತ್ರಿಗಳಾವುದನ್ನು ತಪ್ಪಿಸಿಕೊಂಡಂಥ ಭೈರೇಗೌಡರು ಈ ಕಡೆ ಇದ್ದಾಗ, 38-ಸಿ ಬಗ್ಗೆ ಈ ಮಾತುಗಳನ್ನಾಡಿದ್ದಾರೆ. ಇವತ್ತು ಕ್ಯಾಬಿನೆಟ್ ಸದಸ್ಯರಾಗಿ ಈ ಬಿಲ್ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ನಾನು ಅವರನ್ನು ಕೇಳಬೇಕಾಗುತ್ತದೆ. ಏಕೆಂದರೆ, ನನಗೆ ಗೊತ್ತು, ನೀವು ಆನೆಸ್ಟ್ ಆಗಿ ಮಾತನಾಡುವವರು ಎಂದು ರೆಕಾರ್ಡ್ಸ್ ಇದೆ. ಸುಮ್ಮನೆ ಹಾಗೆಲ್ಲಾ ಹೇಳುತ್ತಿಲ್ಲ. ಆವತ್ತು ನಾವ್ಯಾರೂ ಬೆಂಗಳೂರಿನ ಬಗ್ಗೆ ಮಾತನಾಡುವ ಹಾಗೆ ಇರಲಿಲ್ಲ. ಆವತ್ತು ಈ ಅಡೀಷನಲ್ ಕ್ಲಾಸನ್ನು ಇಂಟ್ರೊಡ್ಯೂಸ್ ಮಾಡಿದಾಗ ಕೆ. ಲಕ್ಕಪ್ಪನವರು ಹೀಗೆ ಹೇಳಿದ್ದಾರೆ. "ಈ ತಿದ್ದುಪಡಿಯನ್ನು ಒಪ್ಪಿದರೆ, 1960ನೇ ಇಸವಿಯಿಂದ ಅನೇಕ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಸೇರಿದ 23 ಸಾವಿರ ಸೈಟುಗಳ ಒಡೆತನದವರಿಗೆ ಅನುಕೂಲವಾಗುತ್ತದೆ. ಕೆಲವು ನಗರಾಭಿವೃದ್ಧಿ ಸ್ವಾಧೀನದಲ್ಲಿದ್ದರೆ, ಸ್ವಾಧೀನವಾಗದೇ ಇರತಕ್ಕಂಥ ಹಳೆಯ ಮನೆಗಳು ಕೆಲವು ಇವೆ. ಈಗಾಗಲೇ ಅಭಿವೃದ್ಧಿ ಪ್ರಾಧಿಕಾರದಿಂದ ಸುಮಾರು 8-9 ಸಾವಿರ ಸೈಟುಗಳ ಹಂಚಿಕೆಯಾಗಿದೆ. ಇನ್ನೂ 13 ಸಾವಿರ ಸೈಟುಗಳನ್ನು ಅವರಿಗೆ ಕೊಡಬೇಕಾಗಿದೆ. ಈ ಬಡಾವಣೆಯಲ್ಲಿ ಈಗಾಗಲೇ ಪ್ರಾಧಿಕಾರದವರು ಕೋಟ್ಯಾಂತರ ರೂಪಾಯಿಯನ್ನು ಖರ್ಚು ಮಾಡಿ.... ಎಂದು ಮುಂದೆ ಇನ್ನೇನೋ ಇದೆ. ನನ್ನ ಕಂಟೆಂಷನ್ ಏನೆಂದರೆ, It must have closed on that day 1994ರಲ್ಲಿ ಇದು ಚರ್ಚೆಯಾಯಿತು. ಆವತ್ತು 38-ಬಿ ಮತ್ತು 38-ಸಿ ಯನ್ನು ಇಂಟ್ರೊಡ್ಯೂಸ್ ಮಾಡಿದಿರಿ. ತಾವು ಸ್ವಲ್ಪ ಮುಂದಕ್ಕೆ ಓದಿ ತಿಳಿಯುತ್ತದೆ, ಮೊಯ್ಲಿಯವರು 38-ಬಿ ಯನ್ನು ಮಾಡಿದರು, ಲಕ್ಕಪ್ಪನವರು 38-ಸಿ ಯನ್ನು ಮಾಡಿದರು. ಅವರು ಬಿ.ಡಿ.ಎ. ಛೇರಮೆನ್ ಅಥವಾ ಮತ್ತೊಂದೇನೋ ಆಗಿದ್ದರು. ಇವುಗಳನ್ನು ಮಾಡಿ, ಇವತ್ತಿನ ಡೇಟ್‌ಗೆ 23 ಸಾವಿರ ಜನರಿಗೆ ಕೊಟ್ಟು, ಇದನ್ನು ಕ್ಲೋಸ್ ಮಾಡುತ್ತೇವೆ ಎಂದು ಹೇಳಿದ ನೀವು ಈಗ 1999ರವರೆಗೆ ಅನ್‌ಆಥರೈಸ್ಡ್ ಆಗಿ ಇರುವವರೆಗೆ ಕೊಡುತ್ತೇವೆ ಎಂದು ಒಂದು ಕಡೆ ಹೇಳುವುದು ಮಾಡುತ್ತಿದ್ದೀರಿ. ನನಗೆ ಅರ್ಥವಾಗದಿರುವುದು ಏನೆಂದರೆ, ಜನರಲ್ ಪವರ್ ಆಫ್ ಅಟಾರ್ನಿಯನ್ನು ಅದು ಒಂದು ಟೈಟಲ್ ಅಲ್ಲ, ಅದು ಒಂದು ಡಾಕ್ಯುಮೆಂಟ್ ಅಲ್ಲ ಎಂದು ತಿಳಿದುಕೊಂಡಿರುವವರು ಅದರ ಆಧಾರದ ಮೇಲೆ ಅಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ರೆಗ್ಯುಲರೈಸ್ ಮಾಡಿರುವಾಗ ರಿಜಿಸ್ಟ್ರೇಷನ್ ಏಕೆ ಮಾಡಲಿಲ್ಲ?

ಅಧ್ಯಕ್ಷರು : ಅವರು ಹೇಳಿದರಲ್ಲ. ಜನರಲ್ ಪವರ್ ಆಫ್ ಅಟಾರ್ನಿ ಒಂದು ಟೆಂಪೊರರಿ ಡಾಕ್ಯುಮೆಂಟ್ ಎನ್ನುವುದನ್ನು ಅವರು ಡಿಸ್ಪ್ಯೂಟ್ ಮಾಡಿಲ್ಲ. ಒಬ್ಬ ಅಸಹಾಯಕ ಮಧ್ಯಮ ವರ್ಗದ ಮನುಷ್ಯನನ್ನು ಆ ಡಾಕ್ಯುಮೆಂಟ್ ಮಾಡಿ ಬ್ಲಾಕ್ ಮೇಲ್ ಮಾಡುತ್ತಿದ್ದರೆ ಅವನನ್ನು ಆ ಎಕ್ಸ್‌ಪ್ಲಾಯಿಟೇಷನ್‌ನಿಂದ ಸೇವ್ ಮಾಡುವುದಕ್ಕೆ ಮಾಡುತ್ತಿರುವುದು ಎಂದು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಜನರಲ್ ಪವರ್ ಆಫ್ ಅಟಾರ್ನಿ ಕೊಟ್ಟವನು ವಿತ್‌ಡ್ರಾ ಮಾಡಿದರೆ ಇವರು ಹೇಗೆ ಸೇವ್ ಮಾಡುತ್ತಾರೆ ?

How are they going to save the beneficiary ಇದಕ್ಕೆ ನಮಗೆ ಉತ್ತರ ಬೇಕು.

ನಾನು ಯಾರಿಗೋ ಪವರ್ ಆಫ್ ಅಟಾರ್ನಿ ಕೊಟ್ಟು ನಂತರ ಅದನ್ನು ವಿತ್‌ಡ್ರಾ ಮಾಡಿದಾಗ ಕಾನೂನಿನಲ್ಲಿ ಹೇಗೆ ಸೇವ್ ಮಾಡುತ್ತಾರೆ? ಒಂದು ಪವರ್ ಆಫ್ ಅಟಾರ್ನಿಯನ್ನು, when it is not a document to be registered, ಆ ಡಾಕ್ಯೂಮೆಂಟ್ ರಿಜಿಸ್ಟ್ರೇಷನ್ ಆಗುವುದಕ್ಕೆ ಅಯೋಗ್ಯವಾದುದೆಂದು ಹೇಳಿ ರಿಜಿಸ್ಟ್ರೇಷನ್ ಆ್ಯಕ್ಟ್ ಕೆಳಗೆ ಇದ್ದ ಡಾಕ್ಯುಮೆಂಟ್‌ನ್ನು ನೀವು ಇಷ್ಟತ್ತು ಕನ್ಸಿಡರ್ ಮಾಡಿ ಪವರ್ ಆಫ್ ಅಟಾರ್ನಿಗೆ ಕೊಟ್ಟಿದ್ದೇನೆಂದು ಹೇಳಿ, ಅದರ ಮೇಲೆ ನೀವು ಇವತ್ತು ಟೈಟಲ್ ಟ್ರಾನ್ಸ್‌ಫರ್ ಮಾಡುತ್ತೀರಿ, ಅವನಿಗೆ ಅವನು ವಾಸ ಇರುವ ಜಾಗವನ್ನು ಖಾಯಂ ಮಾಡುತ್ತೀರಿ ರಿಸರ್ವ್ ಮಾಡುತ್ತೇವೆಂದು ಹೇಳಿದರೆ...

ಅಧ್ಯಕ್ಷರು : ಬೇಗ ಮುಕ್ತಾಯ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಹೊತ್ತು ಕಾಯಬೇಕು, ಹೇಳಿ. It is a very embarassing situation to-day. I cann't see them standing. ಎಲ್ಲಾ ಸೀನಿಯರ್ ಲೀಡರ್ಸ್ ಇಲ್ಲಿ ಕುಳಿತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದಕ್ಕೋಸ್ಕರ ಇದನ್ನು ಸಮಾಧಾನಕರವಾಗಿ ಚರ್ಚೆ ಮಾಡುವುದಕ್ಕೆ ಇನ್ನೊಂದು ದಿವಸ ತನ್ನಿ ಸರ್, ಈ ಬಿಲ್ ಬಗ್ಗೆ ಸಮಾಧಾನಕರವಾಗಿ ಚರ್ಚೆ ಮಾಡುವುದಕ್ಕೆ ಇನ್ನೊಂದು ದಿವಸ ತೆಗೆದುಕೊಂಡು ಬಂದರೆ ಏನು ತಪ್ಪು ಇದೆ ?

MR. SPEAKER : Kindly understand my agony. ಅದನ್ನೇ ಅವರು ಹೇಳಿರುವುದು, ಅದೆಲ್ಲ ಆಗುವುದಿಲ್ಲವೆಂದು ಹೇಳಿಯೇ ಇವತ್ತಿನ ಕಾರ್ಯಕಲಾಪದಲ್ಲಿ ಇದನ್ನು ತಂದಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಿದ್ದರೆ, ಅಧ್ಯಕ್ಷರೇ, Then what is the emergency of this Bill ?

MR. SPEAKER : No emergency for me. It is for the government. Please understand the agony of the Chair.

Sri J.C. MADHU SWAMY : It is up to the people of Karnataka, Sir

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 1-1-1995ರಲ್ಲಿದ್ದಂತೆ ಎಷ್ಟು ಜನ ತಮ್ಮ ಹಕ್ಕಿನ ಮುಖಾಂತರ ಈ ಸೈಟುಗಳಲ್ಲಿ ಇದ್ದಾರೆ ಎನ್ನುವುದಕ್ಕೆ ಬಿ.ಡಿ.ಎ. ಹತ್ತಿರ ಒಂದು ಪಟ್ಟಿ ಇದೆಯೇ ?

ಶ್ರೀ ಎಲ್.ಆರ್. ಶಿವರಾಮೇಗೌಡ : ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ನೀವೇ ಉತ್ತರ ಹೇಳುವುದಾದರೆ ನೀವು ಆ ಕಡೆ (ಆಡಳಿತ ಪಕ್ಷದ ಕಡೆಗೆ) ಹೋಗಿ ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಈ ಸದನವನ್ನು ಸುರೇಶ್ ಕುಮಾರ್‌ರವರಿಗೆ ಅಥವಾ ಯಾರೋ ಇಬ್ಬರು ಮಾತನಾಡುವುದಕ್ಕೇ ಬಿಟ್ಟುಬಿಡೋಣಾ ಸರ್, ಬಿ.ಡಿ.ಎ. ಲಿಸ್ಟ್ ಇದೆಯಾ ಎಂದು ಕೇಳಿದಾಗ, ಇದೆ ಎಂದು ನಾನು ಹೇಳುವುದರಲ್ಲಿ ತಪ್ಪು ಏನಿದೆ? ನಾನು ಏನು ಇಲ್ಲಿ ಮೆಂಬರ್ ಅಲ್ಲವಾ ?

(ಗೊಂದಲ)

ಅಧ್ಯಕ್ಷರು : ಶಿವರಾಮೇಗೌಡರೆ, ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ಈ ಸದನದಲ್ಲಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ ನನಗೆ ಒಂದು ದಿವಸ ಕೂಡ ಅಸಹಕಾರವನ್ನು ಕೊಡದೆ ನನ್ನ ಜೊತೆ ಸಹಕರಿಸಿದಂಥ ಮಾನ್ಯ ವಿರೋಧ ಪಕ್ಷದ ಸದಸ್ಯರು ಇಲ್ಲಿ ನಿಂತಿದ್ದಾರೆ. ಒಂದು ತೃಣಮಾತ್ರ ಕೂಡ ನನ್ನ ಮನಸ್ಸಿಗೆ ಅದು ಸಮಾಧಾನವಾಗಿಲ್ಲ. 'ಅವರು ಬಹಳ ಹೊತ್ತಿನಿಂದ ನಿಂತಿದ್ದಾರೆ ದಯಮಾಡಿ ಬೇಗ ಬೇಗ ಮಾತನಾಡಿ ಮುಗಿಸಿ ಎಂದು ಶ್ರೀ ಮಾಧುಸ್ವಾಮಿಯವರಿಗೆ ಮಾತನಾಡಲು ಅವಕಾಶ ಕೊಡುವಾಗಲೂ ಕೂಡ ನಾನು ಹೇಳಿದೆ. ಈ ಬಿಲ್‌ನ್ನು ಇವತ್ತು ತರುವುದಕ್ಕೆ ಪ್ರಬಲವಾದಂಥ ವಿರೋಧ ಇತ್ತು. ಮೊನ್ನೆ ಇದರ ಬಗ್ಗೆ ಬಿ.ಎ.ಸಿ. ನಲ್ಲಿ ಒಪ್ಪಿಸಿ ತಂದಿದ್ದೇವೆ. ತಾವು ಬಿ.ಡಿ.ಎ. ಅಧ್ಯಕ್ಷರಾಗಿದ್ದೀರಿ ಎಂದ ಮಾತ್ರಕ್ಕೆ ತಾವು ನನ್ನ ಅನುಮತಿ ಇಲ್ಲದೆ ಅಲ್ಲಿ ಇದ್ದು ಸದಸ್ಯರಿಗೆಲ್ಲಾ ಆ ರೀತಿ ತಾವು ಮಾತನಾಡುವುದಕ್ಕೆ ಆಗುವುದಿಲ್ಲ. ಇದು ಸಾರ್ವಜನಿಕವಾಗಿ ಬಹಳ ಪ್ರಮುಖವಾದಂಥ ವಿಚಾರ ಆಗಿರುವುದರಿಂದ ಅವರು ಏನು ಹೇಳುತ್ತಾರೆ ಅದನ್ನು ಕೇಳುವುದಕ್ಕೆ ನಮಗೆ ತಾಳ್ಮೆ ಇರಬೇಕಾಗುತ್ತದೆ. ನೀವು ತೀರಾ ಅಷ್ಟು ಅಸಹನೆಯಿಂದ ವರ್ತಿಸಬಾರದು. ದಯಮಾಡಿ ಸಹಕರಿಸಿ ನಾನು ಈ ಕೆಲಸವನ್ನು ಒಳ್ಳದ ಮನಸ್ಸಿನಿಂದ ಮಾಡುತ್ತಿದ್ದೇನೆ. ಅವರನ್ನೆಲ್ಲಾ ಇಲ್ಲಿ ನಿಲ್ಲಿಸಿ ಮಾಡುವುದಕ್ಕೆ ನನಗೆ ಇಷ್ಟ ಇಲ್ಲ. ಆದರೆ ನಾನು ನನ್ನ ಕರ್ತವ್ಯವನ್ನು ನಿರ್ವಹಣೆ ಮಾಡಬೇಕಾಗಿದೆ. ನಿಮ್ಮ ಕೆಲಸ ನಡೆಸಿಕೊಡುತ್ತೇನೆ ಎಂದು ಸರ್ಕಾರಕ್ಕೆ ನಾನು ಮಾತು ಕೊಟ್ಟಿದ್ದೇನೆ. ತಾವು ಸ್ವಲ್ಪ ಸಹನೆಯಿಂದ ಇರಬೇಕಾಗುತ್ತದೆ. ಆ ರೀತಿ ಮಾಡಬಾರದು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಬಹಳ ಕ್ಲಿಯರ್ ಆಗಿ ಎರಡು ವಿಚಾರಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. 1-1-1995ರಲ್ಲಿದ್ದಂತೆ ಬಿ.ಡಿ.ಎ. ಹತ್ತಿರ ಎಷ್ಟು ಜನ ತಮ್ಮ ಈ ಹಕ್ಕಿನ ಮುಖಾಂತರ ಈ ಸೈಟುಗಳಲ್ಲಿ ಇದ್ದಾರೆ ಎನ್ನುವುದಕ್ಕೆ ಒಂದು ಪಟ್ಟಿ ಇದೆಯೇ? ಈ ಪಟ್ಟಿಯ ಆಧಾರದ ಮೇಲೆ ಬಿಲ್‌ನ್ನು ಆ್ಯಕ್ಟ್ ಮಾಡಿದ ಮೇಲೆ ಕೊಡುತ್ತೀರಾ? ಎರಡನೆಯದು, ತ್ರೀಮ್ಯಾನ್ ಕಮಿಟಿ ಹಿಂದೆ ಇದ್ದರೆ ಮಾಡುತ್ತೇವೆಂದು ಹೇಳಿದಿರಿ, ತ್ರೀಮ್ಯಾನ್ ಕಮಿಟಿ ಮುಖಾಂತರ ಈ ಎಲ್ಲಾ ಡಿಸ್‌ಪ್ಯೂಟ್‌ಗಳನ್ನು ಸಾಲ್ವ್ ಮಾಡುವುದಕ್ಕೆ ಇಲ್ಲಿ ಒಂದು ಸ್ಪೇಟ್‌ಮೆಂಟ್‌ನ್ನು ಅಧಿಕೃತವಾಗಿ ಮಾಡುತ್ತೀರಾ ?

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, 1-1-1995ನ್ನು ಕಟ್ ಆಫ್ ಡೇಟ್ ಎಂದು ಮಾಡಿ ಸನ್ಮಾನ್ಯ ಮೊಯಿಲಿ ಅವರು ಇದ್ದಾಗ ಅರ್ಜಿಗಳನ್ನು ಏನು ಕರೆದಿದ್ದರು. ಹಾಗೆ ಅರ್ಜಿಗಳನ್ನು ಕರೆದಿರತಕ್ಕಂಥದ್ದರ ಜೊತೆಗೆ, ಪ್ರಾಯಶಃ ಅವತ್ತು ಏನು ಆಯಿತು ಎಂದರೆ ಇದ್ದಕ್ಕಿದ್ದ ಹಾಗೆ ನಾವು ನಿರ್ಣಯ ಮಾಡಿದ್ದಂಥ ಖಾತಾ ತೆಗೆದುಕೊಳ್ಳುತ್ತೇವೆ ಎನ್ನುವ ಭಾವನೆಯನ್ನು 38 'ಸಿ' ನಲ್ಲಿ ಅಧಿಕಾರಿಗಳು ತಂದಿದ್ದರಿಂದ ಕೆಲವರು ಕೊಟ್ಟಿಲ್ಲ. ತ್ರೀಮ್ಯಾನ್ ಕಮಿಟಿ ಬಗ್ಗೆ ಮಾನ್ಯ ಸದಸ್ಯರು ಹೇಳಿದರು, ಆಯುಕ್ತರನ್ನು ಕೂಡ ಸೇರಿಸಿ ಮೂರು ಜನ ಅಧಿಕಾರಿಗಳುಳ್ಳ ಒಂದು ಸಮಿತಿಯನ್ನು ಕೂಡ ಮಾಡಿ ಈ ಸಮಿತಿಯಲ್ಲಿ ಬರತಕ್ಕಂಥ ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ಪಟ್ಟಿ ಮಾಡಿ ಬೋರ್ಡ್‌ಗೆ ತಂದು, ಬೋರ್ಡಿನಿಂದ ಸರ್ಕಾರದ ವಿವೇಚನೆಗೆ ಬಿಟ್ಟು ತೀರ್ಮಾನವನ್ನು ಮಾಡುತ್ತೇವೆ, ಎಂದು ಸ್ಪಷ್ಟವಾಗಿ ನಾನು ತಮಗೆ ಹೇಳುತ್ತೇನೆ. ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಈ ತೊಂದರೆ ಮತ್ತು ನಗರಪಾಲಿಕೆ, ಬಿ.ಡಿ.ಎ., ಸಿ.ಎಂ.ಸಿ.ನವರು ಹೀಗೆ ಎಲ್ಲರೂ ಒಟ್ಟಿಗೆ ಹೋಗಿ ಆ ಮಧ್ಯಮ ವರ್ಗದವರಿಗೆ ಆಗತಕ್ಕಂಥ ಹಿಂಸೆಯನ್ನು ತಪ್ಪಿಸುವುದಕ್ಕೋಸ್ಕರ ಇದನ್ನು ತರುವ ಉದ್ದೇಶವಾಗಿದೆ. 1-1-1995ರಲ್ಲಿ ಸುಮಾರು 46 ಸಾವಿರ ಅರ್ಜಿಯಲ್ಲಿ 12 ಸಾವಿರ ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಿದ್ದಾರೆ. ಅದನ್ನು ಮಾಡುವಾಗ ಏನು ಮಾಡಿಬಿಟ್ಟರು ಅಂದರೆ ಬಾಕಿಯವರು ಯಾರಾದರೂ ಸಣ್ಣಪುಟ್ಟ ಇದ್ದು ಅರ್ಜಿ ಹಾಕತಕ್ಕಂಥವರಿಗೆ, ಇದು ನಮಗೆ ಬರುವುದಿಲ್ಲ ಎಂದು ಕೆಲವರು ಅರ್ಜಿ ಹಾಕಿಲ್ಲದೇ ಇರಬಹುದು. ಅದು ಬಿಟ್ಟರೆ ಲಕ್ಷಾಂತರ ಮನೆಗಳಿಗೆ ನಾವು ಮಾಡುತ್ತಿಲ್ಲ. 1-1-1995ರಲ್ಲಿ ಏನು ಈಗಾಗಲೇ ಅರ್ಜಿಗಳಿವೆ ಆ ಅರ್ಜಿಗಳ ಜೊತೆ ತ್ರೀಮ್ಯಾನ್ ಅಫಿಷಿಯಲ್ ಕಮಿಟಿ ಕೂಡ ಮಾಡುತ್ತೇವೆ. ಅಫಿಷಿಯಲ್ ಕಮಿಟಿಯವರು ಬರತಕ್ಕಂಥ ಎಲ್ಲಾ ಅರ್ಜಿಗಳನ್ನು ತೆಗೆದುಕೊಂಡು, ಅವರೇ ಸ್ವತಃ ಸ್ಥಳಗಳಿಗೆ ಹೋಗಿ ಅವರು ಕೊಡತಕ್ಕಂಥ ರಿಪೋರ್ಟ್ ಪ್ರಕಾರ ಬೋರ್ಡಿಗೆ ಬಂದು, ಬೋರ್ಡಿನಿಂದ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ಇದರಲ್ಲಿ ಯಾರೂ ಕೂಡ ಅನುಮಾನ ಪಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಹೊಸ ಅರ್ಜಿಗಳನ್ನು ತೆಗೆದುಕೊಳ್ಳುತ್ತೀರಿ.

ಶ್ರೀ ವಿ. ಸೋಮಣ್ಣ : ನಾವು ತೆಗೆದುಕೊಳ್ಳುವುದಿಲ್ಲ. ಕಮಿಟಿಯವರು ತೆಗೆದುಕೊಳ್ಳುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಒಂದು ಎಕರೆ ಜಾಗದಲ್ಲಿ ನೂರಾರು ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿ ಸರಿಯಾದ ರಸ್ತೆಗಳು ಇಲ್ಲ. ಅವರಿಗೆ ಏನು ವ್ಯವಸ್ಥೆ ಮಾಡುತ್ತೀರಿ? ಅಂದರೆ ಅಲ್ಲಿ ಪ್ಲಾನಿಂಗ್ ಇಲ್ಲದೆಯೇ ಕಟ್ಟಿದ್ದಾರೆ. ಮತ್ತು 1986ನೇ ಇಸವಿಯಿಂದ 1995ನೇ ಇಸವಿವರೆಗೆ ನೂರಾರು ಕೇಸುಗಳು ರೀಕನ್ಸ್ಟ್ರಕ್ಷನ್ ಆಗದೆಯೇ ರಿಜೆಕ್ಟ್ ಆಗಿ, ಹೈಕೋರ್ಟಿಗೆ ಹೋಗಿ ರಿಜೆಕ್ಟ್ ಆಗಿದೆ. ಅವರಿಗೆ ಏನು ಮಾಡುತ್ತೀರಿ ? ಅವರಿಗೂ ಕೂಡ ಇದೇ ಪರಿಸ್ಥಿತಿ ಆಗಿದೆ. 1995ನೇ ಇಸವಿಯಲ್ಲಿ ಇದ್ದ ಅವರ ಅಪ್ಲಿಕೇಷನ್ ಇವತ್ತು ಇಲ್ಲ. ಕಾನೂನು ಪ್ರಕಾರ ಅವರ ಅಪ್ಲಿಕೇಶನ್ ವಿಲೇವಾರಿ ಆಗಿ ಅವರದೆಲ್ಲಾ ರಿಜೆಕ್ಟ್ ಆಗಿ ಹೋಗಿದೆ. ಅಂಥವರಿಗೆ ತಾವು ಏನು ಮಾಡುತ್ತೀರಿ, ಅದು ಕೂಡ ತಾವು ಹೇಳಬೇಕಾಗುತ್ತದೆ. ಅವರಿಗೆ ಅನ್ಯಾಯ ಆಗಬಾರದು ಎನ್ನುವುದರ ಕಡೆಗೆ ತಾವು ಏನು ಸೇಫ್‌ಗಾರ್ಡ್ ಮಾಡುತ್ತೀರಿ ಎನ್ನುವುದನ್ನು ಕೂಡ ತಿಳಿಸಬೇಕಾಗುತ್ತದೆ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ರಸ್ತೆ ಬದಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿರ ತಕ್ಕಂಥವರು ಪ್ರಾಯಶಃ ಎಷ್ಟು ಇದೆ ಎಂಬುದನ್ನು ಸರ್ವೆ ಮಾಡಿಸಿ, ತಕ್ಷಣವೇ ರಸ್ತೆ ಬದಿಯಿಂದ ಅವರನ್ನು ತೆಗೆದು ಅವರಿಗೆ ಬೇರೆ ಆಲ್ಟರ್ನೇಟೀವ್ ಅರೇಂಜ್‌ಮೆಂಟ್ ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ ಎಕರೆಗಟ್ಟಲೆ ಜಾಗ ಇರತಕ್ಕಂಥವರಿಗೆ ಯಾವುದೇ ಕಾರಣಕ್ಕೂ ನಾವು ಖಾತೆ ಮಾಡುವುದಿಲ್ಲ. ಇಂಡಿವಿಜ್ಯುಯಲ್ ಆಗಿ ಬಡವ ಕಟ್ಟಿಕೊಂಡಿರತಕ್ಕಂಥ ಮನೆಗಳು ಬಿಟ್ಟರೆ ಪ್ರಾಯಶಃ ಇನ್ನು ಯಾವುದಕ್ಕೂ ಕೂಡ ಇದು ಅನ್ವಯವಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಸ್ತೆ ಬದಿಯಲ್ಲಿನ ಮನೆಗಳನ್ನು ತೆಗೆಸುತ್ತೇವೆಂದು ಹೇಳಿದರೆ ಎಲ್ಲವನ್ನೂ ತೆಗೆಸಿಬಿಡಿ. When they are prepared to evict somebody, why cannot all? ರಸ್ತೆಗೆ ತೊಂದರೆಯಾಗಿರುವವರನ್ನು ಅಲ್ಲಿ ಓಡಾಡುವವರಿಗೆ ತೊಂದರೆಯಾಗಿರುವಾಗ this is from the mouth of the Minister in the House.

MR. SPEAKER : I am putting it to the vote of the House.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋರ್ಟ್ ರೀಕನ್ಸೈ ಮಾಡಬಾರದೆಂದು ಆದೇಶ ಕೊಟ್ಟಿದ್ದರೂ ಸಹ, 1986ನೇ ಇಸವಿಯಲ್ಲಿ ಈ ಕೇಸನ್ನು ಮುಕ್ತಾಯ ಮಾಡತ್ತೇವೆಂದು ಹೇಳಿ ಮಾಡಿ ಶಾಸನ ಸರಿಯಾಗಿಲ್ಲ ಎಂದು ಹೇಳಿದರೂ ಸಹ ಮತ್ತೆ ಇದನ್ನು ಇಲ್ಲಿ ಇನ್‌ಟೆನ್‌ಷನಲ್ ಆಗಿ ತಂದಿರುವುದರಿಂದ ಇದಕ್ಕೆ ಪ್ರತಿಭಟನೆ ಮಾಡಿ ಆಚೆಗೆ ಹೋಗುತ್ತೇನೆ.

(ಈ ಹಂತದಲ್ಲಿ ಶ್ರೀ ಜೆ.ಸಿ. ಮಾಧುಸ್ವಾಮಿ ಅವರು ಸಭಾತ್ಯಾಗ ಮಾಡಿದರು).

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"1999ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ಕ್ಕೆ ತಿದ್ದುಪಡಿ

ಶ್ರೀ ವಿ. ಸೋಮಣ್ಣ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 2ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ಮಾಡಬೇಕೆಂದು ತಿದ್ದುಪಡಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"That in Clause 2, in sub-section (2) sought to be inserted, after the words "sub-section (1), where the" words "Authority after carrying out a survey of land vested in or" shall be inserted."

"That in clause (2), in Sub-Section (2) of Section 38C of the Bangalore Development Authority Act, 1976, sought to be inserted :-

(a) for the words and brackets "any other person who has put up such

structure or building on the land or such original owner or other person who is in occupation of the land, (the burden of proving which shall be on him) "the words" the Purchaser from the original owner or a General power of Attorney holder from such original owner or purchaser in respect of the land, who has put up the structure or building on the land or in favour of such original owner, purchaser or General Power of Attorney holder who is in possession of the land" shall be substituted ;

(b) for items (i) and (ii), the following shall be substituted, namely :-

"(i) the structure or building was in existence on such land prior to the First day of January, 1995 or such original owner, Purchaser or General Power of Attorney holder has been in possession of the land since prior to the First day of January, 1995 and has continued to be in possession of the land as on the date of commencement of the Bangalore Development Authority (Amendment) Act, 1999 ;

(ii) the allottee makes payment towards allotment of land, such amount as the Authority may, subject to the general or special order of the Government determine from time to time ; and

(iii) the total extent of land allotted under this Sub-section together with the land already held by the allottee shall not exceed the ceiling limit specified under Section 4 of the Urban Land (Ceiling and Regulation) Act, 1976.

EXPLANATION :

For the purpose of this Sub-section :-

(a) Land includes site,

(b) 'Original owner of the land' means a person who was occupant of the land immediately before publication of the development scheme which contained proposal for acquisition of such land."

ತಿದ್ದುಪಡಿಯನ್ನು ಮಂಡಿಸಲಾಗಿದೆ.

ಅಧ್ಯಕ್ಷರು : ಮಾನ್ಯ ನಗರಾಭಿವೃದ್ಧಿ ಸಚಿವರು ಖಂಡ 2ಕ್ಕೆ ಮಂಡಿಸಿರುವ ತಿದ್ದುಪಡಿಯನ್ನು ಪರ್ಯಾಲೋಚಿಸುವುದು. The question is :

"That in Clause 2, in sub-section (2) sought to be inserted, after the words "sub-section (1), where the" words "Authority after carrying our a survey of land vested in or" shall be inserted."

"That in clause (2), in Sub-Section (2) of Section 38C of the Bangalore Development Authority Act, 1976, sought to be inserted :-

(a) for the words and brackets "any other person who has put up such structure or building on the land or such original owner or other person who is in occupation of the land, (the burden or proving which shall be on him) "the words" the Purchaser from the original owner or a General Power of Attorney holder from such original owner or purchaser in respect of the land, who has put up the structure or building on the land or in favour of such original owner, purchaser or General Power of Attorney holder who is in possession of the land" shall be substituted ;

(b) for items (i) and (ii), the following shall be substituted, namely :-

"(i) the structure or building was in existence on such land prior to the First day of January, 1995 or such original owner, Purchaser or General Power of Attorney holder has been in possession of the land since prior to the First day of January, 1995 and has continued to be in possession of the land as on the date of commencement of the Bangalore Development Authority (Amendment) Act, 1999 ;

(ii) The allottee makes payment towards allotment of land, such amount as the Authority may, subject to the general or special order of the Government determine from time to time; and

(iii) the total extent of land allotted under this Sub-section together with the land already held by the allottee shall not exceed the ceiling limit specified under Section 4 of the Urban Land (Ceiling and Regulation) Act, 1976.

EXPLANATION :

For the purpose of this Sub-section :-

(a) land includes site,

(b) 'original owner of the land' means a person who was occupant of the land immediately before publication of the development scheme which contained proposal for acquisition of such land."

ತಿದ್ದುಪಡಿ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ತಿದ್ದುಪಡಿಯಾದ 2ನೇ ಖಂಡ

ಅಧ್ಯಕ್ಷರು : 'ತಿದ್ದುಪಡಿಯಾದ 2ನೇ ಖಂಡವು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ತಿದ್ದುಪಡಿಯಾದ 2ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು).

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಎಷ್ಟು ಮಹತ್ವದ್ದು ಎಂದು ಎಲ್ಲರಿಗೂ ಗೊತ್ತಿದೆ. ಸದರಿ ಮಸೂದೆ ಮೇಲಿನ ಚರ್ಚೆಯಲ್ಲಿ ನಾವೆಲ್ಲರೂ ಭಾಗವಹಿಸಬೇಕೆಂದು ಸಾಕಷ್ಟು ತಯಾರಿ ಮಾಡಿಕೊಂಡು ಬಂದಿದ್ದೆವು. ಆದರೆ ಸರ್ಕಾರದ ಹಠಮಾರಿತನ ಧೋರಣೆಯಿಂದ ಕೊನೆಗೆ ನಾವು ಈ ಧರಣಿಯನ್ನು ಮಾಡಬೇಕಾದ ಪರಿಸ್ಥಿತಿ ಬಂತು. ಈ ಪರಿಸ್ಥಿತಿಯಲ್ಲಿ ಇಂಥ ಮಸೂದೆ ಪಾಸ್ ಆಗುತ್ತಾ ಇದೆ. ಈ ಮಸೂದೆಗೆ ತಿದ್ದುಪಡಿ ತರುವುದರಿಂದ ಮುಂದಕ್ಕೆ ಏನಾದರೂ ಅನಾಹುತವಾಗಬಹುದೆಂಬ ಕಾರಣದಿಂದ ಎಲ್ಲೆಲ್ಲಿ ತಪ್ಪುಗಳಿವೆ ಅವುಗಳನ್ನು ಎತ್ತಿಹಿಡಿದು ತೋರಿಸತಕ್ಕಂಥ ಅವಕಾಶ ನಮಗೆ ಹೋಯಿತು. ಆದರೆ ತಾವು ಅದನ್ನು ಕಳೆದಿರಿ ಎಂದು ನಾನು ಹೇಳುವುದಿಲ್ಲ ಅಥವಾ ನಾವು ಬೇಕೆಂದೇ ಕಳೆದುಕೊಂಡೆವು ಎಂದು ನಮಗೆ ದುಃಖ ಇಲ್ಲ. ಏಕೆಂದರೆ, ನಾವು ನ್ಯಾಯಕ್ಕಾಗಿ ಹೋರಾಟ ಮಾಡುವಾಗ ಒಂದು ವಿಶೇಷವಾದಂಥ ಕಾಂಟ್ಯಾಕ್ಟನ್ನು ತೆಗೆದುಕೊಂಡು ಅದರಲ್ಲಿ ಆದಂಥ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿ ತಮ್ಮ ನೋಟೀಸಿಗೆ ತಂದು ಸರ್ಕಾರದ ಮುಂದೆ ನಾವು ಮೂರು ಚಾಯಿಸ್‌ನ್ನು ಅಂದರೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ರೆಫರ್ ಮಾಡುವುದು, ಅಥವಾ ಮಾನ್ಯ ಮುಖ್ಯಮಂತ್ರಿಗಳೇ ಅಧ್ಯಕ್ಷರಿಗೆ ಎಲ್ಲಾ ರೆಕಾರ್ಡ್‌ಗಳನ್ನು ಕೊಟ್ಟು ಆ ರೆಕಾರ್ಡ್ ಆಧಾರದ ಮೇಲೆ ಜಂಟಿ ಸದನ ಸಮಿತಿಯಾದರೂ ಮಾಡಲಿ ಅಥವಾ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಆದರೂ ರೆಫರ್ ಮಾಡಲಿ ಆ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥದ್ದು ಅಧ್ಯಕ್ಷರಿಗೆ ಬಿಡಿ ಎನ್ನುವ ಮಾತನ್ನು ಸಹ ನಾವು ಹೇಳಿದೆವು, ಅದಕ್ಕೂ ಸರ್ಕಾರದ ಕಡೆಯಿಂದ ಒಪ್ಪಿಗೆ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇವರು ಧರಣಿಯನ್ನಾದರೂ ಮಾಡಲಿ ಇಲ್ಲವೆಂದರೆ ಕಾರ್ಯಕಲಾಪದಲ್ಲಿ ಭಾಗವಹಿಸಲಿ. ಏನು ಸರ್ ಇದು. ಧರಣಿ ನಡೆಸುತ್ತಾರೆ ಪುನಃ ಮಧ್ಯದಲ್ಲಿ ಬಂದು ಮಾತನಾಡುತ್ತಾರೆ. ಇವರು ಯಾವುದಾದರೂ ಒಂದು ಮಾಡಬೇಕು. ಇವರು ಎರಡೆರಡು ಮಾಡುತ್ತಾ ಕುಳಿತುಕೊಂಡರೆ ಹೇಗೆ ಅಧ್ಯಕ್ಷರೆ? ನಾವು ಕಾರ್ಯಕಲಾಪದಲ್ಲಿ ಭಾಗವಹಿಸಿ ಮಾತನಾಡುವುದಕ್ಕೆ ಬೆಳಿಗ್ಗೆಯಿಂದ ಕಾದು ಕುಳಿತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದ್ನಿಮಿಷ, ಬೆಳಿಗ್ಗೆಯಿಂದ ಎಂದು ಹೇಳಿದರೆ ಇದು ಬಹಳ ಮುಖ್ಯವಾದ ವಿಷಯವಾಗಿದೆ. ಇದರ ಬಗ್ಗೆ ನಾವು ಹೇಳುವುದೇ ಬೇಡವಾ?

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಪೂರ್ಣ ಧರಣಿ ಮಾಡುವುದಾದರೆ ಮಾಡಲಿ ಇಲ್ಲವೆಂದರೆ ಇವರನ್ನು ಕಾರ್ಯಕಲಾಪದಲ್ಲಿ ಭಾಗವಹಿಸುವುದು ಬೇಡ ಎಂದು ಯಾರೂ ಹೇಳಲಿಲ್ಲ. ಧರಣಿ ಮಾಡುವುದು ಕಡಿಮೆ ಮಾಡಲಿ. ಇದೇ ವ್ಯವಸ್ಥೆ ಈ ಸದನದಲ್ಲಿ ನಡೆಯುತ್ತಿದೆ. ಹಿರಿಯ ಸದಸ್ಯರಿದ್ದಾರೆ. ಅವರ ಬಗ್ಗೆ ನಾನು ಮಾತನಾಡುವುದಕ್ಕೆ ಇಚ್ಛಿಪಡುವುದಿಲ್ಲ. ಯಾವ ವ್ಯವಸ್ಥೆ ಇದು? ತಾವು ಹಿರಿಯರು ನಾನು ನಿಮ್ಮ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದನ್ನು ಸ್ವಲ್ಪ ಕೇಳಿ.ನಮ್ಮ ಮಾತನ್ನು ಸ್ವಲ್ಪ ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಮಾತು ಕೇಳುತ್ತೇವೆ, ಕೇಳುವುದಿಲ್ಲ ಎಂದು ನಾನು ಹೇಳುವುದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಮಾತು ಕೇಳುವುದಕ್ಕೆ ಬಂದಿಲ್ಲ.. ಅಂದರೆ, ತಾವು ಸದನ ನಡೆಸಿ ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಈ ರೀತಿ ಚಾಲೆಂಜ್ ಮಾಡಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಇದು ಬಹಳ ಮುಖ್ಯವಾಗಿದೆ ಎಂದು ಶಾಂತಿಯುತವಾಗಿ ಮಾತನಾಡುತ್ತಿದ್ದೇವೆ. ನೀವು ಈ ರೀತಿ ಹೇಳಿದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ನೀವು ಇದರ ಬಗ್ಗೆ ರೂಲಿಂಗ್ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾನು ವಿರೋಧ ಪಕ್ಷದ ನಾಯಕರು ಮಾಡಿರತಕ್ಕಂಥ ಚಾಲೆಂಜ್ ರಿಸೀವ್ ಮಾಡುವುದಕ್ಕೆ ತಯಾರಿಲ್ಲ. ಧರಣಿ ಮಾಡಲಿ ಇಲ್ಲಾಂದ್ರೆ ಮಾತನಾಡಲಿ, ಎರಡೆರಡು ಮಾಡಿದರೆ ಹೇಗೆ ? ಈ ರೀತಿಯ ಕೆಲಸ ಬೆಳಿಗ್ಗೆಯಿಂದಲೇ ನಡೆಯುತ್ತಿದೆ. ಅಧಿವೇಶನ ಪ್ರಾರಂಭವಾದ ಮೇಲೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಆಗುವುದಕ್ಕಿಂತ ಮುಂಚೆಯಿಂದ ಇದೇ ವಿಷಯ ಚರ್ಚೆಯಾಗುತ್ತದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಇದು ಬೇಡವಾಗಿದೆ, ಬೇಡ ಆದರೆ ತಾವು ಇದನ್ನು ಬಿಟ್ಟುಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಬೇಡ ಎಂದು ನಾನು ಹೇಳುತ್ತಿಲ್ಲ. ನೀವು ವಿರೋಧಿಸಿ ನಾವು ಕೂಡ ವಿರೋಧಿಸುತ್ತೇವೆಂದು ಹೇಳಿದ್ದೆವು. ಆದರೆ, ಇದಕ್ಕೊಂದು ಪದ್ಧತಿ ಇದೆ, ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ನೀವು ಇದರ ಬಗ್ಗೆ ರೂಲಿಂಗ್ ಕೊಡಬೇಕು. ಏಕೆಂದರೆ, ಎಲ್ಲಾ ಶಾಸಕರು ತಮ್ಮ ಕ್ಷೇತ್ರದ ಬಗ್ಗೆ ಮಾತನಾಡುವುದಕ್ಕಾಗಿ ಕಾಯುತ್ತಿದ್ದಾರೆ. ಈಗಾಗಲೇ ಸಮಯ 5.30 ಆಗಿದೆ ಕೊನೆಗೆ ಏನು ಆಗುತ್ತದೆ ಎಂದರೆ, ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಬಗ್ಗೆ ಏನು ಕೇಳುವುದಕ್ಕೆ ಆಗುವುದಿಲ್ಲ, ಇದೊಂದು ರೀತಿಯಲ್ಲಿ ಜನಗಳಿಗೆ ದ್ರೋಹ ಮಾಡಿದ ರೀತಿ ಆಗುತ್ತದೆ. ಧರಣಿ ಮಾಡಲಿ ಇಲ್ಲಾಂದ್ರೆ ಮಾತನಾಡಲಿ, ಎರಡೆರಡು ಒಟ್ಟಿಗೆ ಮಾಡುತ್ತೇವೆಂದರೆ ಇದು ತಮಗೆ ಬಿಟ್ಟಿದ್ದು.

ಶ್ರೀ ಕೆ.ಎನ್. ನಾಗೇಗೌಡ : ಒಂದೊಂದು ಸಬ್ಜೆಕ್ಟ್ ಮೇಲೆ ನಾವು ಅಜೆಂಡ ಪ್ರಕಾರ ಹೋಗಿದ್ದೇವೆ. ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಧರಣಿ ಮಾಡಿದ್ದಾರೆ. ಆ ಸಬ್ಜೆಕ್ಟ್ ಮುಕ್ತಾಯಗೊಂಡು ಬಿಲ್ ತೆಗೆದುಕೊಂಡು ಬಿಲ್ ಪಾಸಾದ ಮೇಲೆ ಪುನಃ ಅದೇ ಸಬ್ಜೆಕ್ಟ್ ತೆಗೆದುಕೊಳ್ಳುವುದಕ್ಕೆ ತಾವು ಅವಕಾಶ ಕೊಡುವುದಾದರೆ ನಮ್ಮದೇನು ಅಭ್ಯಂತರವಿಲ್ಲ. ಬಹಳ ಹಿರಿಯರು, ವಿರೋಧ ಪಕ್ಷದ ನಾಯಕರು, ಮಂತ್ರಿಗಳಾಗಿದ್ದಂಥವರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸದನ ನಡೆಸಿ ನೋಡುತ್ತೇನೆ ಎನ್ನುವ ಮಾತು ಹೇಳಿದರೆ ಹೇಗೆ? ಸದನ ನಡೆಸಿಯೇ ನಡೆಸುತ್ತೇವೆ. what sort of word he is using ನೀವು ಈ ರೀತಿ ಹೇಳಬಾರದು, ಸದನಕ್ಕೆ ಗೌರವ ತರುವ ರೀತಿಯಲ್ಲಿ ಮಾತನಾಡಬೇಕು. ಈ ರೀತಿ ನೀವು ಮಾತನಾಡಿದರೆ ಸದನಕ್ಕೆ ಖಂಡಿತವಾಗಿ ಗೌರವ ತರುವುದಿಲ್ಲ. ಆದ್ದರಿಂದ, ತಾವು ಆ ಪದ ವಾಪಸ್ ತೆಗೆದುಕೊಳ್ಳಬೇಕು. I am very sorry, it is not correct.

(ಗೊಂದಲ)

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. I am in the last phase.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಏನು ಮಾತನಾಡುತ್ತೇನೆ ಎನ್ನುವುದಕ್ಕಿಂತ ಮುಂಚೆನೇ ಅವರೇ ಈ ರೀತಿ ಊಹೆ ಮಾಡಿಕೊಂಡು ಮಾತನಾಡಿದ್ದು ನನಗಂತೂ ಇದು ಸರಿಯಲ್ಲ. ಅವರಿಗೆ ಸರಿ ಎನಿಸಿರಬಹುದು. ನಾನು ಏನು ಹೇಳುತ್ತೇನೆ ಎಂದರೆ, ನಾವು ಗಲಾಟೆ ಮಾಡಬೇಕೆಂದರೆ ನಮಗೇನು ಗಲಾಟೆ ಮಾಡುವುದಕ್ಕೆ ಬರುವುದಿಲ್ಲವೆ? ಬೇರೆ ರೀತಿಯಿಂದಲೂ ಗಲಾಟೆ ಮಾಡಿದರೆ ತಾವು ಒಂದು ಸಲ ನಮಗೆ ಬಯ್ಯಬಹುದು. ಆದರೆ, ನಾವು ಈ ರೀತಿ ಮಾಡಬಾರದು, ಏಕೆಂದರೆ ಈ ಸದನದಲ್ಲಿ ಆ ರೀತಿ ಆಗಿಲ್ಲ ಎಂದು ನಾವು ಶಾಂತಿಯಿಂದ ಈ ಸದನದಲ್ಲಿ ಕುಳಿತಿದ್ದೇ ತಪ್ಪು ಎನ್ನುವ ರೀತಿಯಲ್ಲಿ ಆಯಿತು. ಜೋರಾಗಿ ಇಲ್ಲಿ ಚೀರುವುದು, ಕೂಗುವುದು, ಅಥವಾ ಪೇಪರ್ ಬಿಸಾಡುವುದು, ಇಲ್ಲಾಂದ್ರೆ ಸ್ಪೀಕರ್ ಪೋಡಿಯಂಗೆ ಹೋಗಿ ಗಲಾಟೆ ಮಾಡುವುದು, ಈ ರೀತಿ ಮಾಡಿದರೆ ನೀವು ಒಳ್ಳೆಯದು ಎನ್ನುತ್ತೀರಾ? ನಾವು ಹೇಳುವುದು ಏನೆಂದರೆ, ನಾವು ಇಷ್ಟೊಂದು ಶಾಂತ ರೀತಿಯಲ್ಲಿ ಕುಳಿತು ಪ್ರಾಮುಖ್ಯವಾದ ಬಿಲ್ ಪಾಸ್ ಆಗುವ ಸಂದರ್ಭದಲ್ಲಿ ಸರ್ಕಾರದವರು ಕನಿಷ್ಠ ಸೌಜನ್ಯಕ್ಕಾದರೂ, ಈ ಬಿಲ್‌ನ್ನು ಮುಂದಕ್ಕೆ ಹಾಕುತ್ತೇವೆ, ಇಲ್ಲಾಂದ್ರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ

ಮಾಡಿಕೊಡುತ್ತೇವೆ, ಇಲ್ಲಾಂದ್ರೆ ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತೇವೆ, ಎನ್ನತಕ್ಕಂಥ ಒಂದು ಮಾತನ್ನು ಕೂಡ ಹೇಳಲಿಲ್ಲ. ಇಲ್ಲಿ ವಿರೋಧ ಪಕ್ಷದವರು ಕುಳಿತಿದ್ದಾರೆ ಬೈವಾಟರ್ ಸಮಸ್ಯೆಯನ್ನು ಚರ್ಚೆ ಮಾಡಿ ಬಗೆಹರಿಸೋಣ ಎನ್ನುವ ಒಂದು ಸೌಜನ್ಯವನ್ನೂ ತೋರಿಸಲಿಲ್ಲ. ಆದ್ದರಿಂದ, ಪ್ರಮುಖವಾದ ವಿರೋಧ ಪಕ್ಷವನ್ನು ಒಳಗಿಟ್ಟು, ನೀವೇನು ಮಾಡೋದು ಮಾಡಿಕೊಳ್ಳಿ ಎಂದು ಹಾಗೂ ನಾವೇನು ಪ್ರಸ್ತಾಪ ಮಾಡಿರುತ್ತೇವೆ ಅದಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಕೊಡದೇ ನಿಮ್ಮ ಪಾಡಿಗೆ ನೀವು ಬಿದ್ದಿರಲಿ ಎನ್ನುವ ಧೋರಣೆಯಿಂದ ಸರ್ಕಾರ ವರ್ತನೆ ಮಾಡುವುದಾದರೆ ನಾವು ಏನು ಮಾಡಬೇಕು? ಜನಗಳ ಮುಂದೆ ಹೋಗಿ ಅಲ್ಲಿ ಎಲ್ಲವನ್ನೂ ಹೇಳಬೇಕಾಗುತ್ತದೆ; ಎಲ್ಲರೂ ತಮ್ಮ ಕ್ಷೇತ್ರದಲ್ಲಿ ಹೇಳಬೇಕಾಗುತ್ತದೆ, ಇಲ್ಲವೆಂದಲ್ಲ. ಆದರೆ, ಹೇಳುವುದಕ್ಕೆ ಒಂದು ಮಾರ್ಗ ಬೇಕಲ್ಲ. ಪ್ರತಿಯೊಬ್ಬರು ಕೂಡ ನಾವು ಇಲ್ಲಿ ಶಾಂತಿಯುತವಾಗಿ ನಿಂತಿದ್ದೇವೆ ಎಂದು ತಿಳಿದುಕೊಂಡು every-thing is granted, ನಮಗೇನು ತಿಳಿಯುತ್ತದೆ ಅದನ್ನು ನಾವು ಮಾತನಾಡಿಕೊಂಡು ಹೋಗುತ್ತೇವೆ ಎನ್ನುವುದಾದರೆ ಇದು ಸರಿಯೇ? ಆದ್ದರಿಂದ, ಸರ್ಕಾರದ ಈ ಧೋರಣೆ ಏನು ಇದೆ ಇದನ್ನು ನಾವು ಪ್ರತಿಭಟಿಸುತ್ತೇವೆ. ಇದರ ಜೊತೆಗೆ ನಮ್ಮ ಅನೇಕ ಶಾಸಕರು ತಮ್ಮ ತಮ್ಮ ಕ್ಷೇತ್ರಗಳ ಬಗ್ಗೆ ಮಾತನಾಡಬೇಕಾಗಿದೆ. ಇವರ ಆಸೆಯನ್ನು ಮೊಟಕುಗೊಳಿಸಬೇಕು ಎನ್ನುವ ಇಚ್ಛೆ ನನಗಿಲ್ಲ. ಇದರ ಜೊತೆಗೆ ಸದನದ ಸಮಯವನ್ನು ಹಾಳು ಮಾಡಬೇಕು ಎನ್ನುವುದು ಇಲ್ಲ. ಹಾಳು ಮಾಡಬಾರದು ಎಂದು ತಿಳಿದುಕೊಂಡೆ ಮಾನ್ಯ ಈಶ್ವರಪ್ಪನವರು ಹಾಗೂ ಸುರೇಶ್‌ರವರನ್ನು ಕರೆದು ಒಂದು ಕಡೆ ಕೂಡಿಸಿ ನಾವು ಎಲ್ಲಾ ಸೇರಿಕೊಂಡು ಮಾತನಾಡಿ ಆ ಒಂದು ಸಲಹೆಯನ್ನು ಕೂಡ ಕೊಟ್ಟಿದ್ದೇವೆ. ಬೇರ್ಪಡಿಸಬೇಕು ಎಂದಿದ್ದರೆ ನಾವು ಅವರ ಹತ್ತಿರ ಹೋಗುತ್ತಿರಲಿಲ್ಲ. ಅವರ ಜೊತೆ ಮಾತನಾಡುತ್ತಿರಲಿಲ್ಲ. ಅದಕ್ಕಾಗಿ ಅವರ ಈ ಧೋರಣೆಯಿಂದ ನಿಜವಾಗಲೂ ನಮಗೆ ಬೇಸರವಾಗಿದೆ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಅವರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ, ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದು.

ಶ್ರೀ ಕೆ.ಎಸ್. ನಾಗೇಗೌಡ : ಸದನ ಹೇಗೆ ನಡೆಸುತ್ತೀರಿ ಎಂದರೆ ಏನು ಅರ್ಥ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಅದನ್ನು ಮಾಡಿ ಅಭ್ಯಾಸ ಇರತಕ್ಕಂಥದ್ದು ನಿಮಗೆ.

(ಗೊಂದಲ)

ಪ್ರಸ್ತಾವದ ಅಂಗೀಕಾರ

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು) : ಅಧ್ಯಕ್ಷರೇ, 1999ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, *

"1999ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ತಿದ್ದುಪಡಿಯಾದಂತೆ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಿ.ಬಿ. ಶಿವಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಬಿಜಾಪುರ ತಾಲ್ಲೂಕಿನಲ್ಲಿ ಇಬ್ಬರು ರೈತರು ಆತ್ಮಹುತಿ ಮಾಡಿಕೊಂಡಿರುವುದು.

+ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಪ್ಪ (ತ್ರಿಕೋಟಾ) : ಮಾನ್ಯ ಛೇರ್ಮನರೇ, ಬಿಜಾಪುರ ತಾಲ್ಲೂಕಿನಲ್ಲಿ ಇಬ್ಬರು ರೈತರು ಪುನಃ ಆತ್ಮಹುತಿ ಮಾಡಿಕೊಂಡಿರುವ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ನಿನ್ನೆ ಬಂದಿದೆ. ಇದರ ಬಗ್ಗೆ ಸರ್ಕಾರದವರು ಪರಿಹಾರ ಕೊಡಬೇಕು ಎನ್ನುವ ದೃಷ್ಟಿಕೋನ ಇಟ್ಟುಕೊಂಡು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಜಂಟಿ ಸದನ ಸಮಿತಿ ರಚನೆಯಾಗಿ, ಆ ಸಮಿತಿ ವರದಿ ಕೊಟ್ಟು ಇನ್ನೂ ಎರಡು ತಿಂಗಳು ಆಗಿಲ್ಲ, ಇಂಥ ಸನ್ನಿವೇಶದಲ್ಲಿ ಪುನಃ ಇದೇ ರೀತಿಯ ಘಟನೆ ಸಂಭವಿಸಿರತಕ್ಕಂಥದ್ದು ಬಹಳ ದುಃಖಕರವಾದ ಸಂಗತಿ. ಈ ಘಟನೆ ಸಂಭವಿಸುವುದಕ್ಕಿಂತ ಮುಂಚೇನೆ ಆತ್ಮಹುತಿ ಮಾಡಿಕೊಂಡಿರುವ ಆ ಇಬ್ಬರು ರೈತರು ಈಗಾಗಲೇ ಇದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದರು. ಜನವರಿಯಲ್ಲಿ ಆಲಿಕಲ್ ಮಳೆಯಾಗಿ ಬಿಜಾಪುರದಲ್ಲಿ ಒಬ್ಬ ದ್ರಾಕ್ಷಿ ಬೆಳೆಗಾರ ಆತ್ಮಹುತಿ ಮಾಡಿಕೊಂಡಿದ್ದಾನೆ. ಮತ್ತೊಂದು ಕಡೆ ಹಿಟ್ನಳ್ಳಿ ಎನ್ನುವ ಗ್ರಾಮದಲ್ಲಿ ಮಲ್ಲಪ್ಪ ಬಸಪ್ಪ ಕೊರ್ತಿ ಎನ್ನುವವನು ಆತ್ಮಹುತಿ ಮಾಡಿ ಕೊಂಡಿದ್ದಾನೆ. ಒಂದೇ ತಿಂಗಳಲ್ಲಿ ಇಬ್ಬರು ಆತ್ಮಹುತಿ ಮಾಡಿಕೊಂಡಿರುವ ಘಟನೆ ನಡೆದಿದೆ. ಇಂಥ ಸಮಸ್ಯೆಗಳಿಗೆ ಸರ್ಕಾರ ಯಾವರೀತಿ ಪರಿಹಾರ ಕೊಡಬೇಕು ಎನ್ನುವುದಕ್ಕಾಗಿಯೇ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯವರು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ನಾನು ತಮ್ಮಲ್ಲಿ ಏನು ಕೇಳಿಕೊಳ್ಳುತ್ತೇನೆಂದರೆ, ಇಂಥ ಘಟನೆ ನಡೆದಿದೆ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವರು ಇದಕ್ಕೆ ಪರಿಹಾರ ಕಂಡುಕೊಳ್ಳತಕ್ಕಂಥ ಪ್ರಯತ್ನ ಮಾಡದೇ ಇರುವುದನ್ನು ನೋಡಿದರೆ ಬಹುಶಃ ನನಗನ್ನಿಸುತ್ತದೆ ಇಂಥ ಘಟನೆಗಳು ನಡೆಯದಂತೆ ತೆರೆ ಎಳೆಯುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ.

5.50 ಪಿಎಂ.

ದಿನಾಂಕ 12-2-1998ರಂದು ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿರುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಇದೇ ರೈತ ಮೊನ್ನೆ ಮಾರ್ಚ್ 29ನೇ ತಾರೀಖು ಆತ್ಮಹುತಿ ಮಾಡಿಕೊಂಡಿದ್ದಾನೆ. ಇದಕ್ಕಿಂತಲೂ ಪೂರ್ವದಲ್ಲಿ ಮಾರ್ಚ್ 19ನೇ ತಾರೀಖು ಇಂಥ ಒಂದು ಘಟನೆ ನಡೆದಿದೆ. ಇಂಥ ಘಟನೆಗಳು ಮೇಲಿಂದ ಮೇಲೆ ಆಗತಕ್ಕಂಥ ಈ ಸಂದರ್ಭದಲ್ಲಿ ಇವತ್ತು ಶಾಸಕರಾಗಿ ಮಾಡಿರತಕ್ಕಂಥ ಪ್ರಯತ್ನವನ್ನು ನಾವು ಮಾಡಿರುತ್ತೇವೆ. ಆದರೆ ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು